ಆದ್ದರಿಂದ ಸಮಯವನ್ನು ನಿಗದಿಮಾಡಿ ಎಲ್ಲಾ ಪ್ರಶ್ನೆಗಳಿಗೂ ಅವಕಾಶ ಕೊಡಬೇಕಾಗುತ್ತದೆ. ನಾವು ನಮ್ಮ ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೊತ್ತು ಬರುತ್ತೇವೆ. ಆದ್ದರಿಂದ ಇದಕ್ಕೆ ಅವಕಾಶ ಕೊಡಲೇ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ನಾವು ಇದರ ಬಗ್ಗೆ ಒಂದು ರೂಲ್ಸ್ ಕಮಿಟಿ ಮಾಡಿ, ಆ ರೂಲ್ಸ್ ಕಮಿಟಿಯ ಮಾರ್ಗದರ್ಶನ ಪಡೆದು, ಅನಂತರ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನಿಮ್ಮ ಕ್ಷೇತ್ರದ ಸಮಸ್ಯೆಗಳಿರುತ್ತವೆ, ರಾಜ್ಯದ ಸಮಸ್ಯೆಗಳು ಇರುತ್ತವೆ, ರಾಷ್ಟ್ರದ ಸಮಸ್ಯೆಗಳು ಇರುತ್ತವೆ. ಇವುಗಳಿಲ್ಲಕ್ಕೂ ಉತ್ತರಗಳನ್ನು ತರಿಸಿಕೊಡತಕ್ಕ ಕಳಕಳಿ ನನ್ನಲ್ಲಿ ಇದೆ ಎನ್ನುವ ಬಗ್ಗೆ ತಮಗೆ ಅನುಮಾನಬಿಟ್ಟು ಬೇಡವೆಂದು ಹೇಳುತ್ತೇನೆ.

ಈ ದಿವಸ ಬೀರೂರಿನ ಶಾಸಕರಾದ ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ ಅವರ ಜನ್ಮದಿನ. ಅವರ ಈ ಜನ್ಮದಿನದಂದು ನಮ್ಮ ಸದನದ ಎಲ್ಲಾ ಸದಸ್ಯರ ಪರವಾಗಿ ಅನಂತ ಶುಭಾಶಯಗಳನ್ನು ಕೋರಿ, ಅವರಿಗೆ ಭಗವಂತನು ಆಯುರಾರೋಗ್ಯ, ಸುಖ ಸಂತೋಷ ಕೊಡಲೆಂದೂ, ಇನ್ನೂ ಹೆಚ್ಚಿನ ಜನಸೇವೆಯು ಸದವಕಾಶ ಅವರಿಗೆ ದೊರೆಯುವಂತೆಂದೂ ಹಾರೈಸುತ್ತೇನೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ
ರಾಜ್ಯದ ರೈತರ ಸಹಕಾರ ಸಂಘಗಳ ಸಾಲವನ್ನು ಮನ್ನಾ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯ

† ಶ್ರೀ ಬಿ.ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದು ಅತ್ಯಂತ ಪ್ರಮುಖವಾದ ವಿಚಾರವನ್ನು, ನಿಲುವಳಿ ಸೂಚನೆಯ ಮೂಲಕ ಬೇರೆ ವಿಚಾರಗಳನ್ನು ಈ ಸದನದಲ್ಲಿ ಬದಿಗೊತ್ತಿ ಚರ್ಚೆ ಮಾಡಬೇಕೆಂದು ತಮಗೆ ಕಳಹಿಸಿಕೊಟ್ಟಿದೆ. ತಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರ, ಈ ರಾಜ್ಯದ, ಈ ದೇಶದ ರೈತನ ರಾಷ್ಟ್ರೀಕೃತ ಬ್ಯಾಂಕಿನ ೧೦ ಸಾವಿರ ರೂಪಾಯಿ ಒಳಗಿನ ಎಲ್ಲಾ ಸಾಲವನ್ನೂ, ಯಾವುದೇ ಒಂದು ಮಿತಿಯನ್ನು ಅಳವಡಿಸದೇ, ಸಾಲವನ್ನು ಮನ್ನಾ ಮಾಡುವಂಥ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ಆಯಾ ರಾಜ್ಯಗಳಿಗೆ ಸ್ವಲ್ಪ ನೆರವನ್ನು ಕೊಟ್ಟಿದ್ದು, ಕೋಆಪರೇಟಿವ್ ಸೊಸೈಟಿಗಳಲ್ಲಿ ತೆಗೆದುಕೊಂಡಿರುವ ಸಾಲವನ್ನೂ ಸಹ ಮನ್ನಾ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡ ವಿಚಾರ ಇವತ್ತು ಎಲ್ಲರಿಗೂ ಗೊತ್ತಿರುವ ಸಂಗತಿ. ತಮ್ಮ ಮೂಲಕ ಈ ಸದನದ ನಾಯಕರಲ್ಲಿ ಹಾಗೂ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಈ ವಿಚಾರವಾಗಿ ಸಾಕಷ್ಟು ಚರ್ಚೆಯಾಗಿದೆ. ಇದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳತಕ್ಕ ಇಚ್ಛೆ ನನಗಿಲ್ಲ. ನಿನ್ನೆ ದಿವಸ ಲಕ್ಷಾಂತರ ಜನ ರೈತರು, ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದರು. ಬೆಂಗಾಲಕ್ಕೆ ತುತ್ತಾದ, ಅತಿವೃಷ್ಟಿಗೆ ತುತ್ತಾದ ರೈತರ ಒತ್ತಾಯದ ಮೇರೆಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಕೊಟ್ಟು, ಅವರ ಗಮನಪವನ್ನು ಸೆಳೆಯತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಈಗ ತಮ್ಮ ಮೂಲಕ ಸಭಾನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡುವಂಥ ಒಂದು ತೀರ್ಮಾನವನ್ನು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಅಳವಡಿಸಿರತಕ್ಕಂಥ ಈ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಸಾಲವನ್ನು ತೆಗೆದುಕೊಂಡಿರುವ ರೈತ ತ್ರಿಶಂಕುಸ್ವರ್ಗದಲ್ಲಿದ್ದಾನೆ. ಸಾಲ ಮನ್ನಾ ಆಗುವಂಥ ವಾತಾವರಣವೂ ದೇಶದಲ್ಲಿ ಮಾಡಿರುವಂಥ ಈ ಸಂದರ್ಭದಲ್ಲಿ ಅವನಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾದುದು ನಮ್ಮ ಕರ್ತವ್ಯ ಆಗಿದೆ ಆದ್ದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಕೊನೆಯ ಪಕ್ಷ, ಸಹಕಾರಿ ಸಂಘಗಳಲ್ಲಿ ಸಾಲದ ವಸೂಲಾತಿಯನ್ನು ತಡೆಯಾಜ್ಞೆ ಕೊಟ್ಟು ಕೇಂದ್ರ ಸರ್ಕಾರ ಏನು ನೆರವನ್ನು ಕೊಡುತ್ತದೆ, ಅದೇ ರೀತಿ ರಾಜ್ಯ ಸರ್ಕಾರವೂ ನೆರವನ್ನು ಕೊಟ್ಟು ಅವನ ರಕ್ಷಣೆಗೆ ಬರಬೇಕು. ಈ ವಿಚಾರದಲ್ಲಿ ಒಂದು ವಿವರವಾದ ಚರ್ಚೆಯು ಆಗತ್ಯವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸದನದಲ್ಲಿ ಎಲ್ಲರಿಗೂ ಇದರ ಬಗ್ಗೆ ಆಸಕ್ತಿ ಇದೆ ಅತ್ಯಂತ ಆಗತ್ಯ ಇರುವ ಈ ವಿಷಯದಲ್ಲಿ ತಕ್ಷಣ ತಡೆಯಾಜ್ಞೆ ಕೊಟ್ಟು, ರಾಜ್ಯ ಸರ್ಕಾರ ಇವರ ನೆರವಿಗೆ ಬರುವಂತಹ ತೀರ್ಮಾನ ತೆಗೆದುಕೊಳ್ಳುತ್ತದೆಯೇ ಅಥವಾ ಇದರಲ್ಲಿ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ.

ಏನಾದರೂ ಅಡ್ಡಿ ಆತಂಕಗಳು ಇವೆಯೇ ಎಂಬ ಬಗ್ಗೆ ಪೂರ್ಣವಾದ, ವಿವರವಾದ ಚರ್ಚೆ ಆಗುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಈ ನಿಳುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗುತ್ತದೆ ಬೇರೆ ಬೇರೆ ರಾಜ್ಯಗಳೂ, ಅಲ್ಲಿರುವಂಥ ಮುಖ್ಯಮಂತ್ರಿಗಳು ಈ ರೀತಿಯ ಒಂದು ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಸನ್ಮಾನ್ಯ ಸಭಾ ನಾಯಕರು ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ, ತಾವು ಅನುಮತಿಯನ್ನು ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ನಿನ್ನೆಯಿಂದ ಬಜೆಟ್ ಚರ್ಚೆ ಪ್ರಾರಂಭವಾಗಿದೆ, ಬಜೆಟ್‌ನಲ್ಲಿ ಈ ವಿಚಾರವೂ ಪ್ರಸ್ತಾಪಿತವಾಗಿದೆ. ಆದ್ದರಿಂದ ಬೇಕಾದಷ್ಟು ಚರ್ಚೆ ಮಾಡುವುದಕ್ಕೆ ಇನ್ನೂ ಮೂರು ದಿವಸ ಅವಕಾಶ ಇದೆ. ಮಾನ್ಯ ಯಡಿಯೂರಪ್ಪನವರೂ ತಮ್ಮ ಭಾಷಣದಲ್ಲಿ ಇದನ್ನು ದೀರ್ಘವಾಗಿ ಪ್ರಸ್ತಾಪ ಮಾಡಿದಾಗ ಅರ್ಥಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಲೇಬೇಕಾಗುತ್ತದೆ. ಆದ್ದರಿಂದ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ — ತಾವೂ ಕೂಡ ರೈತಾಪಿ ಕುಟುಂಬದ ಹಿನ್ನೆಲೆಯಿಂದಬಂದವರು ರೈತರ ಕಷ್ಟ ತಮಗೂ ಗೊತ್ತಿದೆ; ಆದ್ದರಿಂದ ನಾನು ಈ ರಾಜ್ಯದ ರೈತನ ಪರವಾಗಿ ಮಾತ್ತೆ, ಮಾತ್ತೆ, ಹೇಳುವಂಥ ಆಗತ್ಯ ಇಲ್ಲವೆಂದು ಭಾವಿಸುತ್ತೇನೆ. ಈಗಾಗಲೇ ಶೇಕಡ ೧೨ ಭಾಗ ವಸೂಲಾಗಿದೆ. ಇದೂ ಸಹ ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳು ಸಾಲ ಮನ್ನಾ ಮಾಡಿದಾಗ ಅವನು ಕಟ್ಟಿದಂಥ ಸಾಲವನ್ನು ವಾಪಸ್ ಮಾಡುವಂಥ ದೈರ್ಯವನ್ನು ಯಾವುದೇ ಸರ್ಕಾರಗಳೂ ಮಾಡುವುದಿಲ್ಲ. ಇಡೀ ದೇಶದಲ್ಲಿ ಸಾಲ ವಸೂಲಾತಿ ನಿಂತಿದೆ. ಬೇರೆ ಬೇರೆ ರಾಜ್ಯಸರ್ಕಾರಗಳು ತಡೆಯಾಜ್ಞೆ ಕೊಟ್ಟಿದ್ದಾರೆ, ಸಾಲ ಮನ್ನಾ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ರಾಷ್ಟ್ರೀಕೃತ ಬ್ಯಾಂಕಿನ ಸಾಲವನ್ನು ಮನ್ನಾ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಹೇಳಿಕೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಏನು ನೆರವು ಕೊಡುತ್ತದೆಯೋ ಅದನ್ನು ಆಲೋಚನೆ ಮಾಡಿ ನಾವು ಒಂದು ತೀರ್ಮಾನಕ್ಕೆ ಬರಬೇಕಾದರೆ ಕಾಲಾವಕಾಶ ಬೇಕೆಂದು ನನಗೆ ಅರ್ಥವಾಗುತ್ತದೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, ಕೊನೆಯ ಪಕ್ಷ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಸಾಲ ವಸೂಲಿ ಮಾಡದ ಹಾಗೆ ತಡೆಯಾಜ್ಞೆ ಕೊಟ್ಟರೆ, ಮುಂದೆ ಎಲ್ಲರೂ ಇದರ ಬಗ್ಗೆ ಯೋಚನೆ ಮಾಡಿ, ಇದರ ಸಾಧಕ ಬಾಧಕಗಳ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ.

ಸನ್ಮಾನ್ಯ ಸಭಾನಾಯಕರು ಇದರ ಬಗ್ಗೆ ದಯವಿಟ್ಟು— ತಮ್ಮ ಸರಕಾರದ ನಿಲುವೇನು ಎಂದು ಹೇಳತಕ್ಕದ್ದು ರಾಜ್ಯದ ರೈತನ ಹಿತದೃಷ್ಟಿಯಿಂದ ತುಂಬಾ ಆಗತ್ಯ ಇದೆ ಎಂದು ನಾನು ಭಾವಿಸುತ್ತೇನೆ. ಸನ್ಮಾನ್ಯ ಸಭಾನಾಯಕರು ಈ ಬಗ್ಗೆ ಏನು ಹೇಳುತ್ತಾರೆ ಅದಕ್ಕೆ ತಾವು ಅವಕಾಶ ಕೊಡಬೇಕೆಂದು ಕೇಳುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ.— ಸಭಾನಾಯಕರು ಉತ್ತರ ಹೇಳುವುದಕ್ಕೆ ಮುಂಚೆ ನಾನೂ ಅದಕ್ಕೆ ಧ್ವನಿಗೂಡಿಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಏನು ಹೇಳಿದ್ದಾರೆ ಅದಕ್ಕೆ ನನ್ನ ಸಹಮತ ವ್ಯಕ್ತಪಡಿಸುತ್ತಾ, ಕೇಂದ್ರ ಸರಕಾರದವರು ಸಾಲ ಮನ್ನಾ ಮಾಡಿದರೆ ಅದನ್ನು ಈ ಸದನದಲ್ಲಿ ಸಂತೋಷದಿಂದ ಸ್ವಾಗತ ಮಾಡೋಣ ಎಂದು ತಾವು ಹೇಳಿದ್ದಿರಿ. ಟಿ.ವಿ.ಯಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನಾನು ನೋಡಿದೆ ಹಿಂದೆ ಮಾತನಾಡುತ್ತಾ ನಾನು ಇದೇ ಪ್ರಸ್ತಾಪ ಮಾಡಿದ್ದೆ. ಕೇಂದ್ರ ಸರಕಾರದವರು ಸಹಕಾರಿ ಕ್ಷೇತ್ರಗಳ ಸಾಲವನ್ನು ವಜಾ ಮಾಡುವುದಕ್ಕೆ ಬರುತ್ತದೋ ಇಲ್ಲವೋ ಎಂಬುದನ್ನು ಪರೀಕ್ಷೆ ಮಾಡಬೇಕಾಗುತ್ತದೆ. ಸಹಕಾರಿ ಕ್ಷೇತ್ರದ ಸಾಲ ಮನ್ನಾ ಮಾಡುವುದಕ್ಕೆ ರಾಜ್ಯ ಸರಕಾರಗಳಿಗೆ ನೆರವು ಕೊಡುತ್ತೇವೆ ಎಂದು ಹೇಳಿದ್ದಾರೆ. ಅಂಕಿ ೧೦ ಸಾವಿರದ ಒಳಗಿನ ಸಾಲಗಳನ್ನು ಯಾವುದೇ ರೀತಿಯಾದಂಥ ಒಂದು ಪರತ್ತನ್ನೂ ಹಾಕದೆ ವಜಾ ಮಾಡಿದ್ದೇವೆಂದು ಹೇಳಿದ್ದಾರೆ. ಇದನ್ನು ತಾವು ಸ್ವಾಗತಿಸಬೇಕು ಮತ್ತು ರಾಜ್ಯದ ಸಹಕಾರಿ ಕ್ಷೇತ್ರದಲ್ಲಿನ ಸಾಲವನ್ನು ಪರಿಹಾರ ಮಾಡತಕ್ಕಂಥ ಹೊಣೆ ನಿಮ್ಮದೇ ಎಂದು ಹೇಳಿದ್ದಾರೆ. ಇದರ ಬಗ್ಗೆ ನೀವು ಒಂದು ನಿಲುವು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವೀರೇಂದ್ರಪಾಟೀಲ್.— ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರು ನಿನ್ನೆ ಟಿ.ವಿ. ಇಂಟರ್‌ವ್ಯೂನಲ್ಲಿ ನಾನು ಹೇಳಿದ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಕೇಂದ್ರದ ಬಜೆಟ್ ವಿವರಗಳು ಆಗ ಬರುತ್ತಿದ್ದವು, ಪೂರ್ತಿಯಾಗಿ ಬಂದಿರಲಿಲ್ಲ. ಆಗ ದೂರದರ್ಶನದ ಅಧಿಕಾರಿಗಳು ಬಂದು ನನಗೆ ಸಾಲ ಮನ್ನಾ ಮಾಡುವುದರ ಬಗ್ಗೆ ಕೇಂದ್ರ ಸರಕಾರ ಘೋಷಣೆ ಮಾಡಿದೆ, ಎಂದು ಹೇಳಿದರು.

ನಾನು ಪದೇ ಪದೇ ಅವರಿಗೆ ಇದು ನಿಜವೋ ಎಂದು ಕೇಳಿದೆ. ನನಗೆ ಸ್ವಲ್ಪ ಸಂಶಯ ಇತ್ತು. ಇಲ್ಲ ಇದು ಸಂಪೂರ್ಣ ಸತ್ಯ ನಮ್ಮ ಆಫೀಸ್‌ಗೆ ಇದೀಗ ವರದಿ ಬಂದಿದೆ, ಎಂದಾಗ ನಾನು ಹೇಳಿದೆ ಒಂದು ವೇಳೆ ಕೇಂದ್ರ ಸರಕಾರದವರು ಕೃತಕ ಸಾಲ ಮನ್ನಾ ಮಾಡುವುದರ ಬಗ್ಗೆ ಬಜೆಟ್ ವಿಷಯಾಂತರ ಘೋಷಣೆ ಮಾಡಿದ್ದು ನಿಜವಾದಲ್ಲಿ–ನಿಜವಾದಲ್ಲಿ ಎಂಬ ಪದ ನಾನು ಉಪಯೋಗ ಮಾಡಿದ್ದೇನೆ,–ಸ್ವಾಗತ ಮಾಡುತ್ತೇನೆ ಎಂದು ಹೇಳಿದೆ. ಮತ್ತು ಕೇಂದ್ರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂಬ ವಿಚಾರವನ್ನು ನೇಮಿದ್ದೇನೆ. ಇದು ಆದಮೇಲೆ ವಿವರಗಳು ಬಂದಾಗ ನನಗೆ ಸ್ವಲ್ಪ ಸಮಾಧಾನವಾದರೂ ಹೆಚ್ಚು ಅಸಮಾಧಾನವಾಯಿತು. ಇದನ್ನು ನಾನು ಸ್ಪಷ್ಟಪಡಿಸುತ್ತೇನೆ. ನಿನ್ನೆ ರಾತ್ರಿ ಏನು ವಿವರಗಳು ಬಂದವು ಆ ಬಗ್ಗೆ ಇವತ್ತು ಬೆಳಿಗ್ಗೆ ಪತ್ರಿಕೆ ಓದಿದ ಮೇಲೆ ಆದರ ಪುಷ್ಟಿ ಕಡಿಮೆಯಾಗಿದೆ. ಮಾನ್ಯ ಸದಸ್ಯರಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಇಷ್ಟೇ, ನುಡಿಯಲ್ಲಿ ಮತ್ತು ನಡೆಯಲ್ಲಿ ವ್ಯತ್ಯಾಸ ಇರಬಾರದು. ಮತ್ತು ಈ ಒಂದು ಹಿನೆ ಲೆಯಲ್ಲಿ ಇವತ್ತು ನಾನು ಹೇಳಬೇಕಾಗಿದ್ದರೆ, ಕೇಂದ್ರದ ಹಣಕಾಸು ಮಂತ್ರಿಗಳು ಬಜೆಟ್ ಭಾಷಣದಲ್ಲಿ ಸಾಲ ಮನ್ನಾ ಮಾಡುವುದರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಮತ್ತು ನ್ಯಾಷನಲ್ ಫ್ರಂಟ್ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುವುದರ ಬಗ್ಗೆ ಏನು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಇವೆರಡರಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಭೂಮಿ ಆಕಾಶಕ್ಕೆ ಎಷ್ಟು ವ್ಯತ್ಯಾಸ ಇದೆಯೋ ಅಷ್ಟು ವ್ಯತ್ಯಾಸ ಇದೆ ಎನ್ನುವಂಥ ಮಾತನ್ನು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ಸ್ವಾಭಾವಿಕವಾಗಿ ಹೊರಗಡೆಯಿಂದ from outside they are your partners ಆದಕ್ಕಾಗಿ ಅವರದ್ದು ಯಾವುದೂ ಪ್ರಯತ್ನ ನಿಮ್ಮ ಹುಳುಕನ್ನು ಅರಸುವುದಲ್ಲ ನಮ್ಮ ಹುಳುಕನ್ನು ಅರಸುವುದು. ಅದನ್ನೂ ಅವರು ಮಾಡಿದ್ದಾರೆ ಅಷ್ಟೇ ಇವತ್ತು ಅವರ ಸ್ಟೇಟ್‌ಮೆಂಟ್ ಓದಿ ಹೇಳುತ್ತಿದ್ದೇನೆ. ಹಿಂದೆ ಯಾವ ರೀತಿಯಿಂದ ಭರವಸೆ ಕೊಟ್ಟಿದ್ದರು ಅದನ್ನು ಇವತ್ತು ಟ್ವಿಸ್ಟ್ ಮಾಡಿ, ಯಾವ ರೀತಿಯಿಂದ ಇಂತಹ ಒಂದು ಬೃಹದಾಕಾರವಾದ ಜವಾಬ್ದಾರಿಯಿಂದ ಎಸ್ಕೇಪ್ ಆಗುತ್ತಿದ್ದಾರೆ ಹಾಗೂ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವಂತಹ ಮಾತು ಇದೆ. ಅದನ್ನು ನಾನಂ ಓದುತ್ತೇನೆ.

೧೨.೩೦ ಪಿ. ಎಂ.

ಆ ಸ್ಪೀಚ್ ನಮ್ಮ ಹತ್ತಿರ ಇದೆ. ಬಡವರ ಸಲುವಾಗಿ ಎಷ್ಟು ಕಣ್ಣೀರು ಸುರಿಸಿದ್ದಾರೆ ಎಂಬುದನ್ನು ಹೇಳುತ್ತೇನೆ.

> "Over the years, the poor farmers, artisans and weavers have accumulated debt which they are unable to repay. They have been caught up with vicious circle of indebtedness and low incomes which keep them in perennial poverty. In order to relieve farmers of the burden of debt, an assurance was given in the National Front Manifesto that relief will be provided to farmers that loans up to Rs. 10,000 as on October 2, 1989".....

ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಅವರ ನ್ಯಾಷನಲ್ ಫ್ರಂಟ್ ಚುನಾವಣಾ ಪ್ರಣಾಳಿಕೆಯಲ್ಲಿ ಬಂದಿದೆ. ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಿಂದ ತೆಗೆದುಕೊಂಡಿರತಕ್ಕಂಥ ಸಾಲ ೧೦ ಸಾವಿರ ರೂಪಾಯಿಗಳವರೆಗೆ ರೀಜನಲ್ ಗ್ರಾಮೀಣ ಬ್ಯಾಂಕ್‌ಗಳಿಂದ ತೆಗೆದುಕೊಂಡಿರತಕ್ಕಂಥ ೧೫ ಸಾವಿರ ರೂಪಾಯಿಗಳ ಸಾಲ ಮಾತ್ರ ಮನ್ನಾ ಮಾಡುತ್ತೇವೆ, ಎನ್ನತಕ್ಕಂಥಾದ್ದು ಇಲ್ಲ. ಬಹುಶಃ ಅವರಿಗೆ ನಾವು ಅಧಿಕಾರಕ್ಕೆ ಬರುತ್ತೇವೆಯೋ ಇಲ್ಲವೋ ಎನ್ನುವ ಸಂಶಯದಲ್ಲಿ ಇದ್ದರು, ಏನೋ ಬರೆದು ಬಿಡೋಣ ಏನಾಗುತ್ತದೆ ದೇವರು ಇದ್ದಾನೆ, ಮುಂದೆ ಏನಾಗುತ್ತದೆ, ವಿಚಾರ ಮಾಡೋಣ ಎಂದು ಮಾಡಿದ್ದರೂ ಮಾಡಿರಬಹುದು. ಇವತ್ತು ಅದಕ್ಕಾಗಿ ನಾನು ಟ್ವಿಸ್ಟ್ ಮಾಡಿದ್ದಾರೆ ಎಂದು ಹೇಳುತ್ತಿರುವುದು ಸಾಲ ಮನ್ನಾ ಮಾಡುತ್ತೇವೆ ಎಂದಾಗ ಇರುವ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಲಿ. ಸಾಲ ಮನ್ನಾ ಮಾಡುವುದಕ್ಕೆ ಏನಾದರೂ ಕಂಡೀಷನ್ಸ್ ಹಾಕಬೇಕಾದರೆ ಈ ತರಹದಲ್ಲಿ ಸಾಲ ಮನ್ನಾ ಮಾಡುತ್ತೇವೆ. ಎಂದು ಹೇಳಲಿ. ರೈತರಿಗೆ ಆಗಲಿ ಜನಸಾಮಾನ್ಯರಿಗೆ ಆಗಲಿ ಮತ್ತು ಮತದಾರರಿಗೆ ಆಗಲಿ ನಾನಂ ಒಂದು ಮಾತನ್ನು ಹೇಳುತ್ತೇನೆ ಅದೇನೆಂದರೆ, ನಾವು ಏನು ಹೇಳುತ್ತೇವೆಯೋ ಅದನ್ನು ಸ್ಪಷ್ಟವಾಗಿ ಹೇಳಬೇಕೇ ಹೊರತು ಅದನ್ನು ತಿರುಚಿ ಮಾರಚುವುದಕ್ಕೆ ಅವಕಾಶ ಇಟ್ಟುಕೊಂಡು ಮಾಡುವಂತಹದ್ದಕ್ಕೆ ಅವಕಾಶ ಇರುವುದಾದರೆ ಅದು ಈ ದೇಶದ ಮತದಾರರಿಗೆ ದ್ರೋಹ ಮಾಡಿ

ದಂತಾಗುತ್ತದೆ. ಚೀಟ್ ಮಾಡಿದಂತಾಗುತ್ತದೆ. ಎನ್ನುವ ಮಾತನ್ನು ನಾನು ಹೇಳುತ್ತೇನೆ. ಅವರು ಒಪ್ಪಿಕೊಂಡಿದ್ದಾರೆ. ನಮ್ಮ ರೈತರು ಬಹಳ ಕಷ್ಟದಲ್ಲಿದ್ದಾರೆ. ಆರ್ಟಿಜನ್ಸ್ ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಸಾಲದ ಹೊರೆ ಬಹಳ ಹೆಚ್ಚಾಗಿದೆ. ಅದಕ್ಕೆ ರಿಲೀಫ್ ಕೊಡಬೇಕು ಎಂದ ಮೇಲೆ ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರತಕ್ಕ ರೈತರು ಮಾತ್ರ ಬಹಳ ಕಷ್ಟದಲ್ಲಿದ್ದಾರೆ ಕೋ ಆಪರೇಟಿವ್ ಇನ್‌ಸ್ಟಿಟ್ಯೂಶನ್ಸ್‌ಗಳಲ್ಲಿ ಸಾಲ ತೆಗೆದುಕೊಂಡಿರತಕ್ಕಂಥ ರೈತ ಏನೂ ಕಷ್ಟದಲ್ಲಿ ಇಲ್ಲ ಎಂದು ಆಯಿತು. ಅದೇ ಪ್ರಕಾರ ಅವರು ಇಂದು ಸಾಲ ಮನ್ನಾ ಮಾಡಿರುವಂತಾದ್ದು. ಮುಂದೆ ಅವರು ಏನು ಹೇಳಿದ್ದಾರೆನ್ನುವುದನ್ನು ನಾನು ಹೇಳುತ್ತೇನೆ, ಅದನ್ನು ನೋಡಿ.

> "It is proposed to introduce a scheme for providing debt relief which will have the following features. The relief will be available to borrowers who have taken up to Rs. 10,000 from public sector banks and regional rural banks."

ಏತಕ್ಕೆ ? ರಿಲೀಫ್ ಕೊಡುವುದಾದರೆ ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರುವವರಿಗೆ ರಿಲೀಫ್ ಏತಕ್ಕೆ ಕೊಡುತ್ತೀರಿ ? ಅವರು ಮಾತ್ರ ರೈತರೇ ? ಉಳಿದವರು ರೈತರಲ್ಲವೇ ? ಕೋ-ಆಪರೇಟಿವ್ ಸಂಸ್ಥೆಗಳಲ್ಲಿ ಸಾಲ ತೆಗೆದುಕೊಂಡಿರತಕ್ಕಂಥವರು ರೈತರು ಆಲ್ಲವೇ? ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತೇನೆ.

> "Relief will be available to borrowers who have taken up to Rs. 10,000 from public sector banks and regional banks."

ಎಂದು ಹೇಳಿದ್ದಾರೆ. ನಾನು ಕೇಳುತ್ತೇನೆ. ನೀವು ಏನು ಹೇಳಿದ್ದೀರೋ ಆದು ನೆನಪು ಇರುತ್ತದೆ. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ೧೦ ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡುತ್ತೇವೆ. ಆದರೆ ರೈತರು ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರಬೇಕು. ಇಲ್ಲಾ ರೀಜನಲ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರಬೇಕು, ಅವರಿಗೆ ಮಾತ್ರ ಸಾಲ ಮನ್ನಾ ಮಾಡುತ್ತೇವೆ ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ತೆಗೆದುಕೊಂಡಿರತಕ್ಕಂಥ ರೈತರ ಸಾಲ ಮನ್ನಾ ಮಾಡುವಂಥದ್ದು ಇಲ್ಲ ವೆಂದು ಹೇಳಬೇಕಾಗಿತ್ತು. ಆ ರೀತಿ ಹೇಳಲಿಲ್ಲ. ಅದನ್ನು ಇವತ್ತು ತಿರುಗಿ ಟೈಪ್ಸ್ಟ್ ಮಾಡುವಂಥ ಅವಶ್ಯಕತೆ ಏನು ಇತ್ತು ? ಆಮೇಲೆ ಏನು ಹೇಳಿದ್ದಾರೆಂದರೆ, "as on October 2, 1989" ಆದು ಕರೆಕ್ಟ್. ಆವರ ಎಲೆಕ್ಷನ್ ಮ್ಯಾನಿಫೆಸ್ಟೋದಲ್ಲಿ ಆ ದಿವಸ ಎಷ್ಟು ಸಾಲ ಇತ್ತು ಆದನ್ನು ಮಾತ್ರ ಮನ್ನಾ ಮಾಡುತ್ತೇವೆ. ಅಂದರೆ ೧೦ ಸಾವಿರ ರೂಪಾಯಿಗಳು ಎಂದೂ ಏನು ಹೇಳಿದ್ದಾರೆ ಅದನ್ನು ಮಾಡಿದ್ದಾರೆ. ಎಲ್ಲಿಂದ ಎಲ್ಲಿಯವರೆಗೆ ಎಂದೂ ಹೇಳಿದ್ದಾರೆ.

> "The Central Government will compensate public sector banks and regional rural banks suitable for the debts which are thus written off." ಎಂದರೆ

ಕಾಂಪನ್‌ಸೇಟ್ ಮಾಡುತ್ತೇವೆ. ಎಷ್ಟು ರೈಟ್ ಆಫ್ ಮಾಡಿರುತ್ತಾರೋ ಅಷ್ಟು ಕಾಂಪನ್‌ಸೇಟ್ ಮಾಡುತ್ತೇವೆ ಎನ್ನುವ ಭರವಸೆಯನ್ನು ಅವರು ಕೊಟ್ಟಿದ್ದಾರೆ ಆಲ್ಲಿಂದ ಮುಂದೆ ಏನು ಹೇಳುತ್ತಾರೆ ಎಂದರೆ.

> "The State Governments may also wish to introduce a scheme on the same lines in respect of co-operative banks within their purview. Subject to the constraint of resources, the Central Government will consider suggestions for helping State Governments in implementing a debt relief scheme on the same pattern in respect of Co-operative credit institutions under their control."

The State Government may also wish to introduce a scheme ಅಂದರೆ ಆದನ್ನು ಸ್ಟೇಟ್ ಗೌರ್ನಮೆಂಟ್ ತಲೆ ಮೇಲೆ ಹಾಕಬೇಕೆನ್ನುತ್ತಾರೆ.

"in implementing the debt relief schemes on the same pattern in respect of co-operative credit institutions under the r control."

ಕೋ-ಆಪರೇಟಿವ್ ಬ್ಯಾಂಕುಗಳು ಏನು ಎಂದರೆ, ಅವು ನಮ್ಮ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್‌ನಲ್ಲಿ ಇವೆ, ನಾನು ಒಪ್ಪಿಕೊಳ್ಳುತ್ತೇನೆ. Subject to the constraint of resouces the Central Govt. will consider suggestions for helping State Governments ಅದು ಸಜೆಷನ್ ಅಷ್ಟೇ, ಇನ್ನೂ ಫರ್ಮ್ ಕಮಿಟ್‌ಮೆಂಟ್ ಇಲ್ಲ. in implementing debt relief schemes on the same pattern. ಎಂದಿದ್ದಾರೆ. ಆದು ಯಾವ ಪ್ಯಾಟರ್ನ್ ನವುಗೆ ಅದು ಇನ್ನೂ ಗೊತ್ತಿಲ್ಲ.

ಶ್ರೀ ಬಿ ಎಸ್. ಯಡಿಯೂರಪ್ಪ.—ರಾಷ್ಟ್ರೀಕೃತ ಬ್ಯಾಂಕ್‌ಗೆ ಏನು ಅನ್ವಯ ಮಾಡಿದ್ದಾರೋ ಅದೇ ಪ್ಯಾಟರ್ನ್‌ನಲ್ಲಿ.

ಶ್ರೀ ವೀರೇಂದ್ರ ಪಾಟೀಲ್.—ಅದು ನಿಮ್ಮ ಇಂಟರ್‌ಪ್ರಿಟೇಷನ್ ಆಯಿತು. ನನಗೆ ನೀವು ಇಂಟರ್‌ಪ್ರಿಟೇಷನ್ ಸರಿಯೆಂದು ಕನ್‌ಫರ್ಮೇಷನ್ ತಂದರೆ ನಾನು ನಿಮಗೆ ಪರ್ಸನಲೀ ಥ್ಯಾಂಕ್ಸ್ ಹೇಳುತ್ತೇನೆ. ಅದು ಇಲ್ಲ. ನನಗೆ ಹಾಗೆ ಅನಿಸುತ್ತದೆ.

"in implementing debt relief schemes on the same pettern in respect of co-operative credit institutions under their control."

ಡಿಸ್ಟ್ರಿಕ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಮಂತ್ತು ಪ್ರೈಮರಿ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್, ಲ್ಯಾಂಡ್ ಡೆವಲಪ್‌ಮೆಂಟ್ ಆಪೆಕ್ಸ್ ಬ್ಯಾಂಕ್, ಡಿಸ್ಟ್ರಿಕ್ಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ತಾಲ್ಲೂಕು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಈ ಎರಡೂ ಸಂಸ್ಥೆಗಳು ಇವೆಯಲ್ಲಾ, ಇವುಗಳ ಮುಖಾಂತರ ರೈತರಿಗೆ ಸಾಲದ ವಿತರಣೆಯಾಗುತ್ತದೆ. ಆದರೆ, ಈ ಸಾಲ ಎಲ್ಲಿಂದ ಬರುತ್ತದೆ? ಈ ಸಾಲ ಬರುವುದು ಸರ್ಕಾರದಿಂದ ಅಲ್ಲ. ಈ ಸಾಲ ಬರುವುದು ನಬಾರ್ಡ್‌ನಿಂದ. ನಬಾರ್ಡ್ ಯಾವು ? ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ. ರಿಸರ್ವ್ ಬ್ಯಾಂಕ್‌ನವರು ಏನು ಮಾಡಿದ್ದಾರೆಂದರೆ, ಒಂದು ರೈತರಿಗೆ ಸಾಲ ಕೊಡುವ ಆರ್ಗನೈಸೇಷನ್ ಮಾಡಿದ್ದಾರೆ, ಇದು ನಬಾರ್ಡ್. ಇನ್ನೊಂದು ಇಂಡಸ್ಟ್ರಿಯಲಿಸ್ಟ್‌ಗೆ ಕೊಡುವಂಥ ಆರ್ಗನೈಸೇಷನ್ ಮಾಡಿದ್ದಾರೆ. ಇದು ಐ.ಡಿ.ಬಿ.ಐ. ಅಂದರೆ ರೈತರ ಸಾಲದ ಎಲ್ಲಾ ಜವಾಬ್ದಾರಿಯನ್ನು ರಿಸರ್ವ್ ಬ್ಯಾಂಕ್‌ನವರು ಪ್ರತ್ಯೇಕವಾದಂಥ ಸಂಸ್ಥೆ ಮಾಡಿ ಅದಕ್ಕೆ ಜವಾಬ್ದಾರಿಯನ್ನು ವಹಿಸಿದ್ದಾರೆ. ನಬಾರ್ಡ್‌ನಿಂದ ಆಪೆಕ್ಸ್ ಬ್ಯಾಂಕ್‌ನವರು ತರಬೇಕು, ಆಪೆಕ್ಸ್ ಬ್ಯಾಂಕ್‌ನವರು ಡಿಸ್ಟ್ರಿಕ್ಟ್ ಬ್ಯಾಂಕ್‌ಗೆ ಕೊಡಬೇಕು, ಡಿಸ್ಟ್ರಿಕ್ ಬ್ಯಾಂಕ್‌ನವರು ತಾಲ್ಲೂಕಿಗೆ ಕೊಟ್ಟು ವಿತರಣೆ ಮಾಡಬೇಕು, ಮತ್ತು ಹಾಗೆಯೇ ವಸೂಲಿ ಮಾಡಿ ನಬಾರ್ಡ್‌ಗೆ ಕೊಡಬೇಕು, ಮತ್ತು ಮುಂದಿನ ಸಾಲ ತೆಗೆದುಕೊಳ್ಳಬೇಕು. ಈ ಸಾಲ ತರುವ ಜವಾಬ್ದಾರಿ, ಸಾಲ ವಿತರಣೆ ಮಾಡುವ ಜವಾಬ್ದಾರಿ, ಸಾಲ ವಸೂಲಿ ಮಾಡುವ ಜವಾಬ್ದಾರಿ, ಸಾಲ ಒಯ್ದು ನಬಾರ್ಡ್‌ಗೆ ಡೆಪಾಸಿಟ್ ಮಾಡುವಂಥ ಜವಾಬ್ದಾರಿ ನಮ್ಮ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್‌ನಲ್ಲಿರುವಂಥ ಕೋ-ಆಪರೇಟಿವ್ ಬ್ಯಾಂಕ್‌ಗಳಿಗೆ ಇದೆಯೇ ಹೊರತಾಗಿ, ಕೋ-ಆಪರೇಟಿವ್ ಬ್ಯಾಂಕ್‌ನವರು ಕರ್ನಾಟಕ ಸರ್ಕಾರದ ಖಜಾನೆಯಿಂದ ದುಡ್ಡು ತೆಗೆದುಕೊಂಡು ಹೋಗಿ ವಿತರಣೆ ಮಾಡುವುದಿಲ್ಲ. ಇದು ತಮಗೆ ಗೊತ್ತಿದೆ. ಆದಕ್ಕಾಗಿ ಇವತ್ತು ಅವರು ಹೇಳಿದ್ದಾರೆ, ಮಾನ್ಯ ಸದಸ್ಯರು ಹೇಳಿರುವಂತಾದ್ದು, ಅದಕ್ಕೆ ಇಂಟರ್‌ಪ್ರಿಟ್ ಮಾಡುವುದಕ್ಕೆ ಸ್ಕೋಪ್ ಇದೆ. ಪಬ್ಲಿಕ್ ಸೆಕ್ಟಾರ್ ಬ್ಯಾಂಕುಗಳಿಗೆ ನಾವು ಕಾಂಪೆನ್ಸೇಟ್ ಮಾಡುತ್ತೇವೆಂದು ಹೇಳಿದ್ದಾರೋ ಅದೇ ಪ್ಯಾಟರ್ನ್‌ನಲ್ಲಿ ನೀವೂ ಒಂದು ಯೋಜನೆ ಹಾಕಿದರೆ ನಿಮಗೂ ಕಾಂಪನ್‌ಸೇಟ್ ಮಾಡುತ್ತೇವೆಂದು ಹೇಳಿದ್ದಾರೆಂದು ಅವರು ಹೇಳುತ್ತಾರೆ. ಆ ರೀತಿ ಹೇಳಿದರೆ ಮತ್ತೊಮ್ಮೆ, unreservedly I will compliment and congratulate the Union Finance Minister and the Government of India. ಅವಕ್ಕಾಗಿ ನಾನು ಆಗಾಗಲೇ, ನಿನ್ನೆ ಓದಿದ ಮೇಲೆ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ನಮ್ಮ ಸ್ಕೀಮ್ ರೆಡಿ ಮಾಡಿ ಎಂದು. ನಮ್ಮ ಸಾಲ ವಿತರಣೆ ಏನಿದೆ ರೈತರದು, ಅದು ನಮ್ಮ ಹತ್ತಿರ ಎಲ್ಲಾ ರೆಡಿ ಇದೆ. ೧೦ ಸಾವಿರ ಒಳಗಿನ ರೈತರ ಸಾಲದ ಸ್ಟ್ಯಾಟಿಸ್ಟಿಕ್ಸ್‌ನ್ನು ಎಷ್ಟು ಸಾಧ್ಯವೋ ಅಷ್ಟನ್ನು ತಯಾರು ಮಾಡಿ

ದ್ದೇವೆ. ಮತ್ತು ನಮ್ಮದೂ ಒಂದು ಸ್ಕೀಮ್ ತಯಾರು ಮಾಡುತ್ತೇವೆ. ಆದನ್ನು ಒಯ್ದು ಕೇಂದ್ರ ಸರ್ಕಾರಕ್ಕೆ ಕೊಟ್ಟು ಯಾವ ರೀತಿ ನ್ಯಾಷನಲೈಸ್ಡ್ ಬ್ಯಾಂಕ್‌ಗೆ ಕಾಂಪನ್‌ಸೇಟ್ ಮಾಡಿದ್ದೀರೋ ಅದೇ ಪ್ಯಾಟ್ರನ್‌ನಲ್ಲಿ ನಮಗೂ ಕಾಂಪನ್‌ಸೇಟ್ ಮಾಡಬೇಕೆನ್ನುವಂಥ ಯೋಜನೆಯನ್ನು ಮಾಡಿಕೊಳ್ಳುತ್ತೇನೆ. ತಮ್ಮೆಲ್ಲರ ಸಹಕಾರ, ತಮ್ಮೆಲ್ಲರ ಸಹಯೋಗ ಇದ್ದರೆ ಇದು ಪೂರ್ತಿಯಾಗಿ ಯಶಸ್ವಿಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಅವಶ್ಯ ಬಿದ್ದಾಗ ಇದರ ಬಗ್ಗೆ ಏನಾದರೂ ಸ್ಪಷ್ಟೀಕರಣ ಬೇಕಾದರೆ ಹೇಳುತ್ತೇನೆ. ಈ ಒಂದು ಯೋಜನೆಯನ್ನು ತಯಾರು ಮಾಡುವುದಕ್ಕೆ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸಲಹೆ ನೀಡಿದ್ದೇನೆ. ಬಹುಶಃ ಇನ್ನು ಕೆಲವು ದಿವಸಗಳಲ್ಲಿ ಈ ಯೋಜನೆ ತಯಾರಾಗಿ ಕೇಂದ್ರ ಸರ್ಕಾರಕ್ಕೆ ಮುಟ್ಟುತ್ತದೆ. ಆ ವೇಳೆಗೆ ತವಂಗೂ ತಿಳಿಸುತ್ತೇನೆ. ಶ್ರೀ ಮಾನ್ ಯಡಿಯೂರಪ್ಪ ನವರಿಗೂ ತಿಳಿಸುತ್ತೇನೆ, ಅವಶ್ಯ ಬಿದ್ದರೆ ತಾವುಗಳು ದಯವಿಟ್ಟು ಕೇಂದ್ರದ ಹಣಕಾಸಿನ ಮಂತ್ರಿಗಳ ಮೇಲೆ, ಕೇಂದ್ರ ಸರ್ಕಾರದ ಮೇಲೆ ತಾವೆಲ್ಲರೂ ಪ್ರಭಾವ ಬೀರಿ ಪಬ್ಲಿಕ್ ಸೆಕ್ಟರ್ ಬ್ಯಾಂಕಿಗೆ ಮತ್ತು ರೀಜನಲ್ ಬ್ಯಾಂಕ್‌ಗೆ ಏನು ಕಾಂಪನ್‌ಸೇಷನ್ ಕೊಡುತ್ತಾರೋ ಅದೇ ಸ್ಕೀಮ್ ಕೆಳಗೆ ರಾಜ್ಯ ಸರ್ಕಾರಕ್ಕೂ ಕಾಂಪನ್‌ಸೇಷನ್ ಪಡೆಯುವಂಥ ಪ್ರಯತ್ನ ಮಾಡುವುದರಲ್ಲಿ ತಾವುಗಳೆಲ್ಲರೂ ಸಹಕಾರಿಯಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬನ್ನಿಕೋಡ್ ಬಸಪ್ಪ ಹನುಮಂತಪ್ಪ.—ಮಾನ್ಯ ಮಂಡಲ್ಕಿ ಮಂತ್ರಿಯವರು ಸಹಕಾರ ಸಂಘದ ಸಾಲ ಮನ್ನಾ ಮಾಡಲಿಕ್ಕೆ ಮನಸ್ಸು ಮಾಡಿದ್ದಾರಾ ಎಂಬುದು ಸ್ಪಷ್ಟವಾಗಲಿಲ್ಲ. ಸಾಲವನ್ನು ಮನ್ನಾ ಮಾಡುತ್ತೀರಾ ? ಆದರ ಬಗ್ಗೆ ಏನಾದರೂ ನಿರ್ಧಾರ ಮಾಡಿದ್ದೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಿದರೆ, ಮುಂದಿನ ಯೋಜನೆಗಳನ್ನು ಕೇಂದ್ರ ಸರ್ಕಾರ ಮಾಡುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆವತ್ತಿನಿಂದ ಇವ್ವೊತ್ತಿನವರೆವಿಗೂ ನಾನು ಈ ಸದನದಲ್ಲಿ ತಮ್ಮ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತರುವಂಥ ಪ್ರಯತ್ನ ಮಾಡಿದ್ದೆ. ಕೇಂದ್ರ ಸರಕಾರ ಮೊದಲ ಬಾರಿಗೆ ಈ ದೇಶದ ರೈತರನ್ನು ಋಣ ಮುಕ್ತರನ್ನಾಗಿ ಮಾಡುವಂಥ ಒಂದು ಯೋಚನೆಯನ್ನು ಮಾಡತಕ್ಕಂಥ ಕಾಲದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದಂಥ ಸಾಲವನ್ನು ಅಂದರೆ ೧೦ ಸಾವಿರ ರೂಪಾಯಿಗಳವರೆಗೆ ಅವನ ಇಳುವರಿ ಮಿತಿಯನ್ನು ಯೋಚನೆ ಮಾಡದೇನೆ ಸಾಲ ಮನ್ನಾ ಮಾಡುವಂಥ ಒಂದು ತೀರ್ಮಾನ ಮಾಡಿದಂಥಾದ್ದು ಸ್ಪಷ್ಟವಾಗಿ ಇದೆ. ಆದುದರಿಂದ ನಾನು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುವುದೇನೆಂದರೆ ಈ ರಾಜ್ಯದ ರೈತನ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸಾಲವನ್ನು ನಬಾರ್ಡ್‌ಗೆ ಕಟ್ಟಿ, ಮತ್ತೆ ರೀ ಫೈನಾನ್ಸ್ ಮಾಡುವುದಕ್ಕೆ ಅವರು ಜವಾಬ್ದಾರಿ ತೆಗೆದುಕೊಳ್ಳುತ್ತಾ ಇದ್ದಾರೆ, ಉದಾಹರಣೆಗೆ ತಾವು ಕೊಟ್ಟಂಥ ೩೬೫ ಕೋಟಿ ರೂಪಾಯಿಗಳ ಸಾಲ ಸರಕಾರದಿಂದ ಇದ್ದರೆ, ನೀವು ಕೇಂದ್ರ ಸರಕಾರದ ನೆರವು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರೆ ನಬಾರ್ಡ್‌ನವರಿಗೆ ರಾಜ್ಯ ಸರಕಾರದ ಪರವಾಗಿ ಹಣ ಕಟ್ಟುವುದಕ್ಕೆ ನೀವು ಸಿದ್ಧರಿದ್ದೀರಾ ? ತಮ್ಮಲ್ಲಿ ೧೫೦–೨೦೦ ಕೋಟಿ ರೂಪಾಯಿಗಳಷ್ಟು ಹಣ ಕಟ್ಟುವುದಕ್ಕೆ ಸಾಧ್ಯವಿಲ್ಲ ಆದರೆ ಇಂಟ್ರಿಸ್ಟ್‌ಲೆಸ್‌ಲೋನ್ ಕೊಟ್ಟರೆ ಆ ಹಣವನ್ನು ಕಟ್ಟುವುದಕ್ಕೆ ಸಿದ್ಧರಿದ್ದೇವೆ ಎಂದು ಹೇಳಿ ಈ ರೀತಿಯಾಗಿ ರಾಜ್ಯಸರಕಾರಗಳು ಮುಂದೆ ಬಂದರೆ ಮಾತ್ರ ಈ ರಾಜ್ಯದ ರೈತರನ್ನು ಋಣಮುಕ್ತರನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿನ್ನೆಯ ದಿವಸ ಎಂದು ಕಾಣುತ್ತದೆ. ತಾವುಗಳು ಟಿ. ವಿ. ಸಂದರ್ಶನದಲ್ಲಿ ಕೂಡ ಹೇಳಿದ್ದೀರಿ. ಈ ರೀತಿಯಾಗಿ ಸಾಲ ಮನ್ನಾ ಮಾಡುವುದರಿಂದ ನಿತ್ಯ ಪಸ್ತುಗಳ ಬೆಲೆ ಗಗನಕ್ಕೆ ಏರುತ್ತದೆ ಎಂದು ಆ ಸಂದರ್ಭದಲ್ಲಿ ಹೇಳಿದ್ದೀರಿ. ತಮ್ಮ ಚುನಾವಣೆ ಪ್ರಣಾಳಿಕೆ ಬಗ್ಗೆ ಇಲ್ಲಿ ಚರ್ಚೆಯಾದಾಗ ಕೇಂದ್ರ ಸರಕಾರಕ್ಕೆ ಹೇಳಿ ಇದನ್ನು ಮಾಡಬೇಕೆಂದರೆ ನಿಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿ ಈ ರಾಜ್ಯದ ರೈತರ ಸ್ಥಿತಿಗತಿಗಳು ಸರಿಯಾಗಿ ಇಲ್ಲ' ಅವನ ಸಾಲವನ್ನು ಮನ್ನಾ ಮಾಡಬೇಕೆಂಬ ಕಳಕಳಿ ತಮ್ಮಲ್ಲಿ ಇದೆ ಎಂಬುದು ನನಗೆ ಗೊತ್ತಿದೆ. ಹೀಗಿರಬೇಕಾದರೆ ಕೇಂದ್ರ ಸರಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ತಿಕ್ಕಾಟ ಉಂಟಾಗಿ ರಾಜ್ಯದ ರೈತರು ಬಡವಾಗುತ್ತಾನೆ. ರೈತರು ಸಾಲದಿಂದ ಮುಕ್ತರಾಗಿ, ಸ್ವತಂತ್ರವಾಗಿ, ಸ್ವಾವಲಂಬಿಯಾಗಿ ಕೆಲಸ ಮಾಡಬೇಕೆಂಬ ಅಪೇಕ್ಷೆಯು ನಿಮಗಿದ್ದರೆ, ಆ ದಿಶೆಯಲ್ಲಿ ಹೆಜ್ಜೆಯನ್ನು ಇಡಬೇಕಾಗಿದೆ. ಈ ದೇಶದಲ್ಲಿ ಮೊದಲ ಬಾರಿಗೆ ಕೇಂದ್ರ ಸರಕಾರ ಈ ದೇಶದ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಅನುಕೂಲಕರವಾಗಿ ಯೋಚನೆ ಮಾಡತಕ್ಕಂಥ ಕಾಲದಲ್ಲಿ ನಾವು ಒಂದು ತಿಂಗಳ ಕಾಲದಿಂದ ತಮ್ಮನ್ನು ಒತ್ತಾಯ ಮಾಡುತ್ತಾ ಇದ್ದೇವೆ ನಾವೆಲ್ಲರೂ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡೋಣ. ಈ ದಿಶೆಯಲ್ಲಿ ತಾವುಗಳು ದೊಡ್ಡ ಹೆಜ್ಜೆ ಮುಂದಿಟ್ಟಾಗ ಕೇಂದ್ರ ಸರಕಾರದವರು ನಾವು ಇಷ್ಟು ನೆರವು ಕೊಡುತ್ತೇವೆ ಎಂದು ಹೇಳುತ್ತಾರೆ. ಈ ಒಂದು ನೆಲೆಯಲ್ಲಿ ಕೇಂದ್ರದವರು ನೆರವು ಕೊಡುವುದಕ್ಕೆ ಮುಂದೆ ಬರುತ್ತಾರೆ. ಅದೇ ರೀತಿಯಲ್ಲಿ ರಾಜ್ಯ ಸರಕಾರಗಳು ಇಷ್ಟು ಪರ್‌ಸೆಂಟ್‌ನಷ್ಟು ಭರ್ತಿ ಮಾಡಿಕೊಡಬೇಕು, ಇಷ್ಟು

ಪರ್‌ಸೆಂಟ್‌ನಷ್ಟನ್ನು ನಾವು ತುಂಬಿ ಕೊಡುತ್ತೇವೆ ಎಂದು ಕೇಂದ್ರದವರು ಹೇಳಿದರೆ ನಿಮಗೆ ಇಲ್ಲ ಎಂದು ಹೇಳುವುದಕ್ಕೆ ಆಗುತ್ತದೆಯೇ ? ನಿಮ್ಮಿಂದ ರಾಜ್ಯದ ರೈತರಿಗೆ ಅನ್ಯಾಯ ಮಾಡುವುದಕ್ಕೆ ಆಗುತ್ತದೆಯೇ ? ಈಗ ರಾಜ್ಯದ ರೈತರ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಂಡು ಅವರನ್ನು ಯಾವ ರೀತಿಯಾಗಿ ಋಣಮುಕ್ತರನ್ನಾಗಿ ಮಾಡುವುದಕ್ಕೆ ಇವೊತ್ತು ಏನು ಒಂದು ವಾತಾವರಣ ನಿರ್ಮಾಣವಾಗಿದೆ. ಈ ವಾತಾವರಣವನ್ನು ಉಪಯೋಗಿಸಿಕೊಂಡು ಅವರನ್ನು ಋಣಮುಕ್ತರನ್ನಾಗಿ ಮಾಡದೇ ಹೋದರೆ ರೈತರನ್ನು ಸಾಲ ಮುಕ್ತರನ್ನಾಗಿ ಮಾಡುವುದಕ್ಕೆ ಸರಕಾರಕ್ಕೆ ಆಸಕ್ತಿ ಇಲ್ಲ ಎಂಬ ಭಾವನೆ ಬರುತ್ತದೆ. ನಿಮ್ಮ ನಿಮ್ಮ ತಿಕ್ಕಾಟದಲ್ಲಿ ರಾಜ್ಯದ ರೈತರನ್ನು ಬಡವರನ್ನಾಗಿ, ಸಾಲಗಾರರನ್ನಾಗಿ ಮಾಡಬೇಡಿ. ಈಗ ಕೇಂದ್ರದಲ್ಲಿ ಜನತಾದಳ ಸರಕಾರ ಇದೆ ಒಂದು ವೇಳೆ ಅಲ್ಲಿ ನಿಮ್ಮ ಪಕ್ಷದ ಸರಕಾರವೇ ಇದ್ದು ಇಷ್ಟು ಹಣವನ್ನು ಭರ್ತಿ ಮಾಡಿ ಎಂದು ಕೇಳಿದ್ದಲ್ಲಿ ಇಲ್ಲ ಎಂದು ಹೇಳುತ್ತಾ ಇದ್ದೀರಾ ? ನಾನು ತಮ್ಮಿಂದ ಇಂಥ ಒಂದು ಧೋರಣೆಯನ್ನು ನಿರೀಕ್ಷೆ ಮಾಡಿರಲಿಲ್ಲ. ಈ ದಿಶೆಯಲ್ಲಿ ಒಂದು ದೊಡ್ಡ ಧೈರ್ಯದ ಹೆಜ್ಜೆ ಇಟ್ಟು, ಸಾಲ ವಸೂಲಾತಿಗೆ ತಡೆಯಾಜ್ಞೆ ನೀಡಿ, ನಾವು ಇಷ್ಟು ತುಂಬಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದರೆ ಅದು ಮೆಚ್ಚತಕ್ಕಂಥ ವಿಚಾರ ವಾಗುತ್ತಿತ್ತು. ಕೇಂದ್ರದ ನೆರವು ಪಡೆಯುವುದಕ್ಕೆ ನಾವೆಲ್ಲರೂ ಕೂಡ ಹೋರಾಟ ಮಾಡುವುದಕ್ಕೆ, ಧರಣಿ ಮಂಷ್ಯರ ಮಾಡುವುದಕ್ಕೆ ಹಿಂಜರಿಯುವುದಿಲ್ಲ. ಆದುದರಿಂದ ಈ ಒಂದು ಹಿನ್ನೆಲೆಯಲ್ಲಿ ತಾವುಗಳು ಈ ಸಧ್ಯಕ್ಕೆ ವಸೂಲಾತಿಗೆ ತಡೆಯಾಜ್ಞೆ ಕೊಟ್ಟು, ಆ ಹಣವನ್ನು ರಾಜ್ಯದ ವತಿಯಿಂದ ತುಂಬುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಲು ಅವಕಾಶ ಕಲ್ಪಿಸಿ ಕೊಡುವುದರ ಮೂಲಕ ರೈತರನ್ನು ಋಣಮುಕ್ತರನ್ನಾಗಿ ಮಾಡಲು ಯೋಚಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಬಗ್ಗೆ ತಾವುಗಳು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಕೆಲವು ವಿಷಯಗಳು ನನಗೆ ಅರ್ಥವಾಗುತ್ತಿಲ್ಲ ಕೇಂದ್ರ ಸರ್ಕಾರಕ್ಕೆ ಸಹಕಾರಿ ಸಾಲವನ್ನು ವಜಾ ಮಾಡುವ ಅಧಿಕಾರ ಅವಕಾಶ ಇದೆಯೇ ? ಇದು ಮೊದಲನೇ ಪ್ರಶ್ನೆ. ನಬಾರ್ಡ್ ಸಂಸ್ಥೆ ಮೂಲಕ ರಾಜ್ಯ ಸರ್ಕಾರದ ಜಾಮೀನಿನ ಮೇಲೆ ಸಹಕಾರಿ ಕ್ಷೇತ್ರದ ವಿವಿಧ ಸಂಸ್ಥೆಗಳಲ್ಲಿ ಸಾಲದ ವಿತರಣೆ ಆಗಿರುತ್ತದೆ. ಆದ್ದರಿಂದ ಅದನ್ನು ವಸೂಲು ಮಾಡುವ ಜವಾಬ್ದಾರಿ ಕೂಡ ರಾಜ್ಯ ಸರ್ಕಾರಕ್ಕಿರುತ್ತದೆ. ಅದಕ್ಕೆ ಬೇಕಾಗುವ ಆಡಳಿತ ವ್ಯವಸ್ಥೆಯನ್ನು ಅವರು ಮಾಡಿಕೊಂಡಿರಬೇಕಾಗಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಕೇಂದ್ರ ಸರ್ಕಾರಕ್ಕೆ ಗ್ರಾಮೀಣ ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಮೇಲೆ ಸ್ವಯಂ ಅಧಿಕಾರವಿರುತ್ತದೆ. ಆ ಹಣಕ್ಕೆ ನೇರ ಜವಾಬ್ದಾರಿ ಇರುತ್ತದೆ. ಆದರಂತೆ ಅವರು ಅಧಿಕಾರವನ್ನು ನಿರ್ವಹಿಸಿದ್ದಾರೆ. ಸಹಕಾರಿ ಸಂಸ್ಥೆಗಳ ಜವಾಬ್ದಾರಿಯನ್ನು ಕೇಂದ್ರಸರ್ಕಾರ ಹೊತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಕಾರಣವೇನೆಂದರೆ ವಿವಿಧ ರಾಜ್ಯಗಳಲ್ಲಿ ವಿವಿಧ ವ್ಯವಸ್ಥೆಗಳಿವೆ. ಒಂದು ರಾಜ್ಯದಲ್ಲಿ ಸಹಕಾರಿ ಸಾಲದ ಮೇಲಿನ ಬಡ್ಡಿ ೭ ಪರ್ಸೆಂಟ್ ಇದ್ದರೆ ಇನ್ನೊಂದು ರಾಜ್ಯದಲ್ಲಿ ಹತ್ತು ಪರ್ಸೆಂಟ್ ಇರ ಬಹುದು. ಹೀಗೆ ನಬಾರ್ಡ್‌ಸಾಲ ಕೊಡುವ ರೀತಿನೀತಿ ಆಯಾ ರಾಜ್ಯಕ್ಕೆ ಬೇರೆ ಬೇರೆ ರೀತಿಯಲ್ಲಿರುತ್ತದೆ, ಆದ್ದರಿಂದ ನಿಮ್ಮ ಸಹಕಾರಿ ಬ್ಯಾಂಕ್‌ಗಳ ಮೇಲೆ ನಿಮಗೆ ಕೇವಲ ಆಡಳಿತಾತ್ಮಕ ಹತೋಟಿ ಮಾತ್ರವಲ್ಲದೆ ನೈತಿಕ ಹೊಣೆಗಾರಿಕೆ ಕೂಡ ಇರುತ್ತದೆ. ಮೇಲಾಗಿ ಸಾಲ ಕೊಡುವಾಗ ನಿಮ್ಮ ಜವಾಬ್ದಾರಿ ಸಹ ಇರುತ್ತದೆ. ಈ ಯಾವ ಹೊಣೆಗಾರಿಕೆಯೂ ಕೇಂದ್ರ ಸರ್ಕಾರಕ್ಕೆ ಇರುವುದಿಲ್ಲ. ಆದ್ದರಿಂದ ನಾನು ಹೊರಗಡೆಯೂ ಹೇಳಿದ್ದೇನೆ. ಇಲ್ಲಿಯೂ ಹೇಳಿದ್ದೇನೆ. ಕೇಂದ್ರ ಮತ್ತು ರಾಜ್ಯಗಳ ಮೂಲಕ ಕೊಟ್ಟಿರುವ ಸಹಕಾರಿ ಸಾಲವನ್ನು ಮನ್ನಾ ಮಾಡುವುದಕ್ಕೆ ಬರುವುದಿಲ್ಲ. ಅವರೇನಾದರೂ ನಮಗೆ ಸಹಕಾರ ಕೊಡಬೇಕೆಂದು ನಾವು ಬಯಸಿದರೆ ನಾವೇ ಅವರಿಗೆ ಇಷ್ಟು ಪರ್ಸೆಂಟ್ ನಾವು ವಹಿಸಿಕೊಳ್ಳುತ್ತೇವೆ, ಇನ್ನಿಷ್ಟನ್ನು ನೀವು ವಹಿಸಿಕೊಳ್ಳಿ ಎಂದು ಮೊದಲ ಹೆಜ್ಜೆಯನ್ನು ನಾವೇ ಇಡಬೇಕಾಗುತ್ತದೆ. ಈ ಮಾತನ್ನು ಮುಖ್ಯಮಂತ್ರಿಗಳು ಹೇಳಿದರು. ಆದರೆ ಹಾಗೆ ಹೇಳುವಾಗ ನೀವು ಸ್ಕೀಮ್ ತಯಾರು ಮಾಡಿ ಎಂದರೆ, ಅದು ಅಷ್ಟು ಒಳ್ಳೆಯ ನಿರ್ಧಾರವಾಗಲಾರದು. ಏಕೆಂದರೆ ಈ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಬರುವುದಿಲ್ಲ. ಸಾಲ ಮನ್ನಾ ನೀವೇ ಮಾಡಬೇಕು. ಈ ದಿಸೆಯಲ್ಲಿ ತಾವು ಆಲೋಚನೆ ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಇದು ಕೊಟ್ಟೋನತಾ ಕೋಡಂಗಿ ಈಸ್ಕೊಂಡೋನು ಈರಭದ್ರ ಎನ್ನುವಂತಾಯಿತು ಸಾಲ ಅಂತ ಹೇಳಿದ ಮೇಲೆ ಅದನ್ನು ಮನ್ನಾ ಹೇಗೆ ಮಾಡುವುದು ? ನಿನ್ನೆ ಬಜೆಟ್‌ನಲ್ಲಿ ಕೇಂದ್ರ ಮಂತ್ರಿಗಳು ವಿವರವಾಗಿ ಹೇಳಿದ್ದಾರೆ. ಪಾಪ, ಯಡಿಯೂರಪ್ಪನವರಿಗೆ ಏನೇನು ಆಸೆ ಇತ್ತೋ ಅದನ್ನೆಲ್ಲ ಎರಡು ವಾರೂರು ದಿವಸದಿಂದ ತೀರಿಸಿಕೊಂಡಿದ್ದಾರೆ. ಉಪವಾಸ ಕುಳಿತು ಬಂದಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಉಪವಾಸ ಅಲ್ಲ ಸ್ವಾಮಿ ಧರಣಿ ಕುಳಿತಿದ್ದೆ. ನಿಮ್ಮ ಸರ್ಕಾರದ ವಿರುದ್ಧ ನಾನೇನಾದರೂ ಉಪವಾಸ ಕುಳಿತಿದ್ದರೆ ನೇರವಾಗಿ ಭಗವಂತನ ಪಾದ ಸೇರಿಬಿಡಬೇಕಾಗಿತ್ತು.

ಅಧ್ಯಕ್ಷರು.—ಅಂತೂ ಹುಷಾರಾಗಿ ಬಿಟ್ಟಿರಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಯಡಿಯೂರಪ್ಪನವರಿಗೆ ಉಪವಾಸ ಮಾಡಿ ಗೊತ್ತಿಲ್ಲ ಎಂದು ಕಾಣುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಗೊತ್ತಿದೆ ಸ್ವಾಮಿ. ಆಮೇಲೆ ಬಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ದಯವಿಟ್ಟು ಕೇಳಿ ಸಾಲದ ವ್ಯವಸ್ಥೆ ಏನಿದೆ ಅಂದರೆ ಅದರಲ್ಲಿ ಕೊಡುವವನು ತೆಗೆದುಕೊಳ್ಳುವವನು ಇಬ್ಬರೂ ಇರಬೇಕು. ತೆಗೆದುಕೊಂಡವರು ರೈತರು ಎಂದು ಹೇಳಿಬಿಟ್ಟು ಆಕಾಶಕ್ಕೆ ಅವರನ್ನು ಏರಿಸುವುದಲ್ಲ. ಅವರು ಬಡವರು ಅಂತಾನೂ ಕೆಳಗಿಳಿಸುವುದೂ ಅಲ್ಲ. ಎಲ್ಲರನ್ನೂ ಸಮಾನವಾಗಿ ನೋಡಿಕೊಳ್ಳಬೇಕು. ಸಾಲ ಯಾರಿಗೆ ಕೊಟ್ಟಿರೋದು ? ಯಾರಿಗೆ ಆಸ್ತಿ ಇತ್ತು ಅವರಿಗೆ ಕೊಟ್ಟಿದ್ದಾರೆ, ಸ್ಥಿತಿವಂತರು ಯಾರಿದ್ದರೋ, ಅವರಿಗೆ ಕೊಟ್ಟಿದ್ದಾರೆ ಇವತ್ತು ಅವರೆಲ್ಲರನ್ನೂ ಆ ಸಾಲದ ವಾಪಸ್ಸನ್ನು ಕೊಡಬೇಕು. ಪುನಃ ಬ್ಯಾಂಕುಗಳು ಬೇರೆ ಬೇರೆ ರೈತರಿಗೆ ಸಾಲ ಕೊಡುವ ವ್ಯವಸ್ಥೆಯನ್ನು ಮುಂದುವರಿಸಬೇಕು. ಅದು ಬಿಟ್ಟು ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರ, ಬ್ಯಾಂಕುಗಳ ಮುಖಾಂತರ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡಿ, ಮನ್ನಾ ಮಾಡಿ ರೈತರೆಲ್ಲ ಅಂತರ್ ಪಿಶಾಚಿಗಳಾಗಿದ್ದಾರೆ ಅಂದರೆ ಇದು ಯಾವ ಮಾದ ಸ್ವಾಮಿ ? ಇದಕ್ಕೇನಾ ಕೊನೆ ಮೊದಲು ಬೇಡವೆ ? ದಯವಿಟ್ಟು ಅವರಿಗೆ ವ್ಯವಹಾರ ಮಾಡಲು ಕಲ್ಪಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಹಿರಿಯ ಸಚಿವರಾದಂಥ ಬಸವಲಿಂಗಪ್ಪನವರು ಯಾವ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೋ, ಆ ಸರ್ಕಾರದ ಒಂದು ಚುನಾವಣಾ ಪ್ರಣಾಳಿಕೆಯ ಮೂಲಕ ಅಧಿಕಾರಕ್ಕೆ ಬಂದಿದ್ದರೆ, ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಈ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಚುನಾವಣಾ ಪ್ರಣಾಳಿಕೆಯನ್ನು ಇಟ್ಟುಕೊಂಡು ಚುನಾವಣೆಯಲ್ಲಿ ಗೆದ್ದು ಬಂದಿದ್ದೀರಿ. ದಯಮಾಡಿ ಇದನ್ನು ತಾವು ಮರೆಯಬೇಡಿ.

(ಗೊಂದಲ)

ಶ್ರೀ ಸಿದ್ದನಗೌಡ ಎಸ್. ಪಾಟೀಲ್.—ಸನ್ಮಾನ್ಯ ಮುಖ್ಯಮಂತ್ರಿಗಳು ಆ ರೀತಿಯಾಗಿಯೇ ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಕಾಂಗ್ರೆಸ್‌ಪಕ್ಷ ರಾಷ್ಟ್ರೀಯ ಪಕ್ಷವಾಗಿ ಅಧಿಕಾರಕ್ಕೆ ಬಂದರೆ ರೈತರ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ. ಇದು ಒಂದು ಪ್ರಿನ್ಸಿಪಲ್, ನಾವು ಸಾಲವನ್ನು ಮನ್ನಾ ಮಾಡಿ ಎಂದು ಕೇಂದ್ರಕ್ಕೆ ಒತ್ತಡ ತರುತ್ತೇವೆ ಎಂದು ಹೇಳಿದ್ದಾರೆ. ಒಂದು ವೇಳೆ ನಿಮ್ಮ ಪ್ರಣಾಳಿಕೆಯಲ್ಲಿ ಹೇಳದೆ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಒತ್ತಡ ತರುತ್ತೇವೆ ಎಂದು ಹೇಳಿದ್ದಾರೆ. ಈಗ ನಿಮ್ಮ ಪ್ರಿನ್ಸಿಪಲ್ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಇದು ಕೇಂದ್ರ ಸರ್ಕಾರ ತನ್ನ ವ್ಯಾಪ್ತಿಯ ಒಳಗೆ...

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ನಾವು ಹೇಳಿದಂತೆ ನೀವು ಅದನ್ನು ಇಂಪ್ಲಿಮೆಂಟ್ ಮಾಡಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—That is the point. ನಾನು ವೈಯಕ್ತಿಕವಾಗಿ ತಮ್ಮಲ್ಲಿ ಮನವಿಯನ್ನು ಮಾಡುತ್ತೇನೆ.

(ಗೊಂದಲ)

ಶ್ರೀ ಬಸ್ನಿಕೊಡ್ ಬಸಪ್ಪ. ಹನುಮಂತಪ್ಪ.—ಸಾಲವನ್ನು ಮನ್ನಾ ಮಾಡುವುದಕ್ಕೆ ಒಪ್ಪಿ ಕೊಂಡಿದ್ದಿರಿ. ಈಗ ಮಾನ್ಯ ಬಸವಲಿಂಗಪ್ಪನವರು ಸತ್ಯಕ್ಕೆ ವಿರುದ್ಧವಾಗಿ ಹೇಳುತ್ತಿದ್ದಾರೆ. ಈಗ ಅದಕ್ಕೆ ಈ ವಿಷಯ ಬಂತು.

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ರೈತರ ಪರವಾಗಿ ಇದೆ. ಸುಲಭ ರೂಪದಲ್ಲಿ ಅದನ್ನು ಮಾಡಿ ಕಳುಹಿಸಿಬಿಟ್ಟರೆ ಇಲ್ಲಿ ಚರ್ಚೆ ಕೂಡಾ ಮುಗಿದುಹೋಗುತ್ತಿತ್ತು. ಈ ರೀತಿ ಸುತ್ತು ಬಳಸುವುದು ಏತಕ್ಕೆ ? ಸಾಲವನ್ನು ಮನ್ನಾ ಮಾಡುವುದಕ್ಕೆ ಹೇಳಿ. ನಿಮಗೂ ಕಾಲ ತಪ್ಪುತ್ತದೆ, ನಮಗೂ ಕಾಲ ತಪ್ಪುತ್ತದೆ, ರೈತರು ಕೂಡಾ ಮುಕ್ತಿ ಹೊಂದುತ್ತಾರೆ. ಎಲ್ಲರಿಗೂ ಪ್ರೀತಿಯುಂಟಾಗುತ್ತದೆ. ಅದನ್ನು ಇಟ್ಟುಕೊಂಡು ಸುಮ್ಮನೆ ಏತಕ್ಕೆ, ಬಿಗಿ ಮಾಡುತ್ತೀರಿ ? ನಮ್ಮ ನಾಯಕರ ಬಗ್ಗೆ ಬಹಳ ಗೌರವ ಇದೆ. ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಎಲ್ಲ ವಿಷಯವನ್ನು ಅವರು ತಿಳಿದುಕೊಂಡಿದ್ದಾರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಸಂಲಲಿತವಾಗಿ ಸುಲಭವಾಗಿ ತಮಗೆ ಎಲ್ಲಾ ವಿವರಿಸಿದ್ದಾರೆ. ಎಷ್ಟು ಜನ ರೈತರುಗಳು ಸಾಲ ಕೊಡಬೇಕು ಎಂದು ಸ್ಟೇಟ್‌ಮೆಂಟನ್ನು ತಯಾರು ಮಾಡುತ್ತಿದ್ದೇವೆ, ನಂತರ ಆ ಬಗ್ಗೆ ತಿಳಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತನ ಓಟು ತೆಗೆದುಕೊಂಡು ಅಧಿಕಾರಕ್ಕೆ ಬಂದಿದ್ದೀರಿ. ಆದರೆ ರೈತನನ್ನು ಋಣಮುಕ್ತನನ್ನಾಗಿ ಮಾಡುವುದಕ್ಕೆ ನಿಮಗೆ ಜವಾಬ್ದಾರಿ ಇಲ್ಲವೇ ? ಏನು ಸ್ವಾಮಿ ಇದು ?

ಶ್ರೀ ಟಿ. ಎಂ. ಮಂಜುನಾಥ್ —ಅವರ ಪಕ್ಷಕ್ಕಿಂತ ನಮ್ಮ ಪಕ್ಷದವರಿಗೆ ರೈತರ ಬಗ್ಗೆ ಕಳಕಳಿ ಇದೆ. ರೈತರ ಕಷ್ಟ ಏನು ಎಂದು ಗೊತ್ತಿದೆ, ಸುಮ್ಮನೆ ನಾಟಕ ಆಡುವುದಕ್ಕೆ ಬರಬೇಡಿ. ಹಳ್ಳಿಯಿಂದ ಕಾರ್ಯಕರ್ತರನ್ನು ಕರೆದುಕೊಂಡು ಬಂದು ತಿಂಡಿಯನ್ನು ಕೊಡಿಸುವುದು ಬೇಡ. ಇವತ್ತು ನೀವು ವಾಜಪೇಯಿಯವರಿಗೆ ಹೇಳಿ. ಕೇಂದ್ರ ಸರ್ಕಾರದ ಮುಂದೆ ಇದನ್ನು ತಂದು ವಜಾ ಮಾಡುವ ಬಗ್ಗೆ ನಿಮಗೆ ಶಕ್ತಿ ತಾಕತ್ತು ಇದ್ದರೆ ಹೇಳಿ ಸ್ವಾಮಿ. ಅಲ್ಲಿ ಹೇಳುವುದನ್ನು ಬಿಟ್ಟು ಇಲ್ಲಿ ಏತಕ್ಕೆ ಸುಮ್ಮನೆ ಹೇಳುತ್ತೀರಿ. ನಮ್ಮ ಕೈಯಲ್ಲಿ ರಿಸರ್ವ್ ಬ್ಯಾಂಕ್ ಇದೆಯೇ ? ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಿದ್ದಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೋ-ಆಪರೇಟಿವ್ ಸೊಸೈಟಿಗಳು ರಾಜ್ಯ ಸರ್ಕಾರದ ಒಂದು ವ್ಯಾಪ್ತಿಯು ; ಬರುತ್ತವೆ.

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್ —ಮಾನ್ಯ ಚಂದ್ರೇಗೌಡರಲ್ಲಿ ಪ್ರಾರ್ಥನೆ ಮಾಡುತ್ತೇನೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣವನ್ನು ಈಗಾಗಲೇ ಕೊಟ್ಟಿದ್ದಾರೆ, ಅದರ ಪ್ರಕಾರ ಹೋಗೋಣ.

ಶ್ರೀ ಡಿ. ಬಿ. ಚಂದ್ರೇಗೌಡ. ಮಂಜುನಾಥ್‌ರವರೇ, ಇದು ಸಿನಿಮಾ ಥಿಯೇಟರ್ ಆದರೆ ಇವತ್ತು ಪುಕ್ಕಟೆಯಾಗಿ ಬಿಡಬಹುದು. ಪುಕ್ಕಟೆಯಾಗಿ ಬಿಡುತ್ತೇವೆ ಎಂದು ಹೇಳಿದರೆ ಎಲ್ಲರೂ ಬಂದು ನೋಡಿಕೊಂಡು ಹೋಗಬಹುದು. ಆದರೆ ಇದು ಸಿನಿಮಾ ಥಿಯೇಟರ್ ವ್ಯವಹಾರವಲ್ಲ. ಇಡೀ ದೇಶದ ಸಹಕಾರಿ ಸಾಲಗಳನ್ನು ವಜಾ ಮಾಡಬೇಕಾದರೆ ನಾವು ಗಂಭೀರವಾಗಿ ಆಲೋಚನೆ ಮಾಡಬೇಕು.

ಶ್ರೀ ಟಿ. ಎಂ. ಮಂಜುನಾಥ್.—ದಯವಿಟ್ಟು ರೈತರ ಬಗ್ಗೆ ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಸಿನಿಮಾ ಥಿಯೇಟರ್ ಆದರೆ ನೋಡಿಕೊಂಡು ಹೋಗಿ ಎಂದು, ಪುಕ್ಕಟೆಯಾಗಿ ಬಿಡಬಹುದು.

ಶ್ರೀ ಟಿ. ಎಂ. ಮಂಜುನಾಥ್.—ಈಗ ಕಾಲ ಬದಲಾಗಿದೆ. ಟಿ.ವಿ. ವಿಡಿಯೋ ಎಲ್ಲಾ ಬಂದಿದೆ. ದಯಮಾಡಿ ರೈತರ ಬಗ್ಗೆ ಮಾತನಾಡೋಣ. ಮೊಸಳೆ ಕಣ್ಣೀರನ್ನು ಹೊರಸುವ ಕೆಲಸ ಇಲ್ಲಿ ಮಾಡುವುದು ಬೇಡ. ಕಾಂಗ್ರೆಸ್‌ನವರು ಇದಕ್ಕೆ ವಿರೋಧ ಮಾಡುತ್ತಿದ್ದಾರೆ, ಇವರು ಏನೋ ರೈತರ ಉದ್ಧಾರ ಮಾಡುತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ಬರುತ್ತದೆ ನಮಗೂ ರೈತರ ಬಗ್ಗೆ ಕಳಕಳಿ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಂಜುನಾಥ್‌ರವರು ಯಾವಾಗ ಬೇಕಾದರೂ ಏಳಬಹುದು, ಯಾವಾಗ ಬೇಕಾದರೂ ಕುಳಿತುಕೊಳ್ಳಬಹುದು, ನಮ್ಮ ಅಧ್ಯಕ್ಷರು ಸುಮ್ಮನಿರುತ್ತಾರೆ. ನಾವೇನಾದರೂ ಕೇಳಿದರೆ ಅಧ್ಯಕ್ಷರ ಅಪ್ಪಣೆಯನ್ನು ತೆಗೆದುಕೊಂಡು ಮಾತನಾಡಬೇಕು, ನಮ್ಮ ಸಭಾ ನಾಯಕರಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇಲ್ಲಿ ಬಹಳ ಗಂಭೀರವಾದ ದೊಡ್ಡ ಸಮಸ್ಯೆ ಇದೆ. ಸಮಸ್ಯೆ ಮತ್ತು ತೊಂದರೆಗಳೇನೂ ಇಲ್ಲ ಎಂದು ಹೇಳಿ ಎಲ್ಲವನ್ನೂ ನಿಮ್ಮ ತಲೆಯ ಮೇಲೆ ಹಾಕಿ ತಪ್ಪಿಸಿಕೊಳ್ಳುವುದಕ್ಕೆ ನಾನು ಸಿದ್ಧನಿಲ್ಲ. ಏನಾದರೂ ಸಲಹೆ ಸೂಚನೆಗಳನ್ನು

ಕೊಡುವುದಿದ್ದರೆ ಕೊಡೋಣ. ಆದರೆ ನಾನು ಒಟ್ಟಾರೆ ಈ ನಿಲುವಿನಲ್ಲಿ ನನ್ನ ಸ್ಪಷ್ಟ ಅಭಿಪ್ರಾಯ ಇದೆ, ಕೇಂದ್ರ ಸರ್ಕಾರದವರು ಮನ್ನಾ ಮಾಡಿರತಕ್ಕಂಥದ್ದನ್ನು ತಮ್ಮ ಇತಿಮಿತಿಯಲ್ಲಿ ಮಾಡಿದ್ದಾರೆ. ಆದರೆ ಸಹಕಾರಿ ಕ್ಷೇತ್ರ ತಮ್ಮ ಇತಿಮಿತಿಯಲ್ಲಿ ಬರುವುದರಿಂದ ಈ ಜವಾಬ್ದಾರಿ ನಿಮಗೆ ಸೇರಿದ್ದು ಎಂದು ಹೇಳಿದ್ದಾರೆ, ನೀವು ಏನಾದರೂ ಸ್ಕೀಮನ್ನು ಕೊಟ್ಟರೆ ಆದಕ್ಕೆ ನೆರವು ಕೊಡುತ್ತೇವೆ ಎಂದು ಕೇಂದ್ರ ದವರು ಹೇಳಿದ್ದಾರೆ. ಆ ನೆರವನ್ನು ಪಡೆಯುವುದಕ್ಕೆ ತಾವು ಏನು ಆಲೋಚನೆಯನ್ನು ಮಾಡುತ್ತಿದ್ದೀರಿ ಎಂದು ತಾವು ಕೇಳಬೇಕಾಗುತ್ತದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೇ, ಬಹಳ ಹೊತ್ತಿನಿಂದ ರೈತರ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಾ ಇದೆ. ಈ ಬಗ್ಗೆ ನನ್ನ ವಿನಂತಿ ಏನು ಎಂದರೆ ಮಾನ್ಯ ಮುಖ್ಯಮಂತ್ರಿಗಳು, ರಾಷ್ಟ್ರೀಯ ರಂಗದ ಹಣಕಾಸಿನ ಮಂತ್ರಿ ಅವರ ಹೇಳಿಕೆಯ ಬಗ್ಗೆ ಬೆರಳು ತೋರಿಸಿದ್ದಾರೆ. ಕೇಂದ್ರದ ಹಣಕಾಸಿನ ಮಂತ್ರಿಗಳು, ರಾಜ್ಯ ಸರ್ಕಾರಗಳ ಹಣಕಾಸಿನ ಮಂತ್ರಿಗಳ ಮನಸ್ಸಿನಲ್ಲಿ ಏನು ಇದೆ, ರೈತರ ಸಾಲ ಮನ್ನಾ ಬಗ್ಗೆ ಎಂದು ತಿಳಿದುಕೊಳ್ಳುವ ತಂತ್ರ ಮುಂದುವರಿಸುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಮುಂಚೆ ರೈತರ ಸಾಲ ರದ್ದು ಮಾಡಬೇಕೋ ಆಥವಾ ಬೇಡವೋ ಎಂಬುದರ ಬಗ್ಗೆ ಒಂದು ಸ್ಪಷ್ಟವಾದ ಚರ್ಚೆ ಆಗಬೇಕು. ಏಕೆಂದರೆ ರೈತರು ನಾವು ಕರ್ನಾಟಕದಲ್ಲಿ ಯಾರೂ ಭಿಕ್ಷೆ ಬೇಡುತ್ತಿಲ್ಲ ನಾವು ಭಿಕ್ಷಂಕರಲ್ಲ. ಶ್ರೀಮಾನ್ ದಂಡವತೆಯವರು ಆಥವಾ ಶ್ರೀಮಾನ್ ರಾಜಶೇಖರಮೂರ್ತಿಯವರು ರದ್ದು ಮಾಡಬೇಕಾಗಿಲ್ಲ, ಸ್ವಾತಂತ್ರ್ಯ ಬಂದ ಳಿಕ ವರ್ಷಗಳಿಂದ ಏನು ನಡೆದಿದೆ ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ವಿತಕ್ಕಾಗಿ ಈ ರೈತನಿಗೆ ಸಾಲ ಬಂದಿದೆ, ಇದನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ನೀವು ಸಾಲವನ್ನು ರದ್ದು ಮಾಡಬೇಕಾಗಿಲ್ಲ. ಉದಾಹರಣೆಗೆ ಈ ವರ್ಷದಲ್ಲಿ ಹತ್ತಿ ಬೆಲೆಯಲ್ಲಿ ಮೋಸ ಆಗಿದೆ. ಬೆಲೆ ಸರಿಯಾಗಿ ಸಿಕ್ಕಿದ್ದರೆ ಉತ್ತರ ಕರ್ನಾಟಕದಲ್ಲಿ ರೈತ ಎರಡು ಪಟ್ಟು ಸಾಲ ವಾಪಸ್ ಬಿಸಾಕುತ್ತಿದ್ದ. ಇದಕ್ಕೆ ನಾವೆಲ್ಲರೂ ಕಾರಣ. ಇಂತಹ ಮೋಸ ಕಳೆದ ಳಿಕ ವರ್ಷಗಳಿಂದ ನಡೆದಿದೆ. ನಾವು ಬೆಳೆಯದೆ ಬಡವರು ಆಗಿಲ್ಲ. ೧೯೪೭ನೇ ಇಸವಿಯಿಂದ ಇಲ್ಲಿಯವರೆಗೆ ೧೦ ರಿಂದ ೨೦ ಪಟ್ಟು ಜಾಸ್ತಿ ಬೆಳೆದಿದ್ದೇವೆ. ಹೆಚ್ಚು ಹೆಚ್ಚು ಬೆಳೆದರೂ ಸಾಲ ಜಾಸ್ತಿ ಆಯಿತು. ನಮ್ಮ ತಾತನಿಗೆ ಸಾಲ ಇರಲಿಲ್ಲ. ನಮ್ಮ ತಾತ ಗಳಿಕೆ ಬೀಜ ಹಾಕಿ ತಿಪ್ಪೆಯ ಗೊಬ್ಬರ ಹಾಕಿ ಎರಡು ಚೀಲ ಬೆಳೆಯುತ್ತಿದ್ದ. ನಾವು ಈಗ ಅದೇ ಭೂಮಿಯಲ್ಲಿ ೨೦ ಚೀಲ ಬೆಳೆಯುತ್ತಿದ್ದೇವೆ. ಎರಡು ಚೀಲ ಬೆಳೆ ಬೆಳೆಯುವಾಗ ಸಾಲ ಇರಲಿಲ್ಲ, ಆದರೆ ೨೦ ಚೀಲ ಬೆಳೆಯುವಾಗ ಸಾಲ ಇದೆ. ನಾವು ಎಲ್ಲಿ ತಪ್ಪಿದ್ದೇವೆ ಎಂಬುದನ್ನು ನೋಡಬೇಕು. ಇದರ ಬಗ್ಗೆ ವೈಜ್ಞಾನಿಕವಾಗಿ ಚರ್ಚೆ ಮಾಡಬೇಕಾಗಿದೆ. ರೈತರಿಗೆ ಮೋಸ ಆಗಿರುವ ಬಗ್ಗೆ ತಜ್ಞರು ಪರದಿ ಕೊಟ್ಟಿದ್ದಾರೆ. ೧೯೭೦ ರಿಂದ ೧೯೮೦ರ ದಶಕದ ಈ ಹತ್ತು ವರ್ಷಗಳಲ್ಲಿ 'ಟರ್ಮ್ ಆಫ್ ಟ್ರೇಡ್' ಅಂದರೆ ಕೈಗಾರಿಕಾ ಮತ್ತು ಕೃಷಿ ನಡುವೆ ಸುಮಾರು ೪೫ ಸಾವಿರ ಕೋಟಿ ರೂಪಾಯಿಗಳವರೆಗೆ ರೈತರಿಗೆ ನಷ್ಟ ಆಗಿದೆ. ನಷ್ಟ ಆಗಿರುವುದು ಎಲ್ಲರಿಗೂ ಗೊತ್ತಾಗಿದೆ. ಐದು ವರ್ಷದ ಬರಗಾಲದ ಅವಧಿಯಲ್ಲಿ ೧೫೦೦ ಕೋಟಿ ರೂಪಾಯಿ ಕೃಷಿ ಉತ್ಪಾದನಾ ನಷ್ಟ ಆಗಿದೆ. ಯಾರಿಗೆ ನಷ್ಟ ಆಯಿತು. ನಾವು ಇಲ್ಲಿ ಚೌಕಾಸಿ ಮಾಡುತ್ತಿದ್ದೇವೆ. ಮೀನ-ಮೇಷ ಮಾಡುತ್ತಿದ್ದೇವೆ. ಕೇವಲ ೩೫೦ ಕೋಟಿ ರೂಪಾಯಿಗಳನ್ನು ರದ್ದು ಮಾಡುವುದಕ್ಕೆ ಚೌಕಾಸಿ. ಶ್ರೀ ದಂಡವತೆಯವರ ಜೊತೆ ಚೌಕಾಸಿ. ನಮ್ಮ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ರಾಜಶೇಖರ್‌ರವರು ಈ ಬಗ್ಗೆ ಏನೂ ಹೇಳಿಲ್ಲ. ಮಾನ್ಯ ಸಭಾದ್ಯಕ್ಷರಿಗೆ ಮಾನ್ಯ ಸಭಾನಾಯಕರಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ವಿವರವಾದ ವೈಜ್ಞಾನಿಕವಾದ ಚರ್ಚೆ ಮಾಡೋಣ. ಇಲ್ಲಿ ರೈತರಿಗೆ ಮೋಸ ಆಗಿಲ್ಲ. ಅವನ ಸೋಮಾರಿತನದಿಂದ ಸಾಲ ಆಗಿದೆ, ಅವನ ಕೆಟ್ಟ ಚಾಳಿಯಿಂದ ಸಾಲ ಆಗಿದೆ ಎಂದು ಸಾಬೀತು ಆದರೆ ಇಡೀ ಕರ್ನಾಟಕ ರಾಜ್ಯದ ರೈತರ ಪರವಾಗಿ ನಾನು ಹೇಳುತ್ತಿದ್ದೇನೆ. ರೈತರ ಸಾಲ ರದ್ದು ಮಾಡಬೇಡಿ. ಇಲ್ಲ ಮೋಸ ಮಾಡಿದ್ದೇವೆ ವಿಶೇಷವಾಗಿ ಬೆಲೆ ನಿಗದಿ ಮಾಡುವಲ್ಲಿ ಮೋಸ ಮಾಡಿದ್ದೇವೆ. ವ್ಯಾಪಾರ ಮಾಡುವಾಗ ಮೋಸ ಮಾಡಿದ್ದೇವೆ ಎಂದು ಹೇಳಿ, ರೈತನ ಆನ್ನದ ಋಣ ತೀರಿಸುವ ಕರ್ತವ್ಯ ಎಲ್ಲರದ್ದೂ ಆಗಿದೆ, ರೈತರ ಋಣ ತೀರಿಸಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಮಾನ್ಯ ಸಭಾ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

೧-೦೦ ಪಿ.ಎಂ.

† ಶ್ರೀ ಎಸ್. ಬಂಗಾರಪ್ಪ (ಸೊರಬ) —ಮಾನ್ಯ ಸಭಾಧ್ಯಕ್ಷರೆ ಈ ವಿಷಯವು ಬಹಳ ಚರ್ಚೆಗೆ ಒಳಪಟ್ಟಿದೆ ಮತ್ತು ಅನೇಕ ದಿನಗಳಿಂದ ಕಾಡತಕ್ಕಂಥ ವಿಷಯವೂ ಕೂಡ ಹೌದು. ರೈತರ ಸಾಲ ಹೇಗೆ ಆಯಿತು, ಅದು ಯಾವ ರೀತಿಯಾಗಿ ಕಳೆದ ಕೆಲವು ದಶಕಗಳಲ್ಲಿ ಏರುತ್ತಾ ಬಂದಿದೆ ಎನ್ನತಕ್ಕಂಥಾದ್ದು

ದೊಡ್ಡ ಚರಿತ್ರೆ ಎನ್ನುವುದು ನಮಗೆಲ್ಲರಿಗೂ ಕೂಡ ಗೊತ್ತಿದೆ. ಕೆಲವು ಸಾರಿ ಪ್ರಕೃತಿಯಿಂದ ತೊಂದರೆಯಾದರೆ, ಕೆಲವು ಸಾರಿ ನಮ್ಮ ಅನುಭವದಲ್ಲಿ ಬಂದಹಾಗೆ ಅವು ಸ್ವಯಂಕೃತ ಅಪರಾಧಗಳು, ನಾನು ಅಪರಾಧ ಎಂತಲೇ ಕರೆಯುತ್ತೇನೆ. ಅನ್ನಕೊಡತಕ್ಕಂಥ ರೈತನ ಕೈಯನ್ನು ಬಲಪಡಿಸ ತಕ್ಕಂಥಾದ್ದೇ ನಮ್ಮೆಲ್ಲರ ಗುರಿ. ಇದು ಎಲ್ಲ ರಾಜಕೀಯ ಪಕ್ಷಗಳ ಗುರಿಯೂ ಆಗಿದೆ. ಅದರಲ್ಲಿ ಅನುಮಾನ ಬೇಕಾಗಿಲ್ಲ. ಚುನಾವಣೆ ಬಂದಾಗ ನಮ್ಮ ಪ್ರಣಾಳಿಕೆಯಲ್ಲಿ ಈ ವಿಚಾರದ ಬಗ್ಗೆ ನಾವು ಹೆಚ್ಚಾಗಿ ಪ್ರಸ್ತಾಪ ಕೂಡ ಮಾಡುತ್ತಾ ಇದ್ದೇವೆ. ಈಗ ಇರತಕ್ಕಂಥ ಸಮಸ್ಯೆ ಏನು, ನಿಜ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಇರತಕ್ಕ ಹಣಕಾಸಿನ ತೊಂದರೆ ಬಹಳ ದೊಡ್ಡ ಪ್ರಮಾಣದ್ದು ಎನ್ನತಕ್ಕಂಥ ವಿಷಯದ ಹಿನ್ನೆಲೆಯಲ್ಲಿ ನಾವು ಚರ್ಚೆ ಕೂಡ ಮಾಡುತ್ತಾ ಇದ್ದೇವೆ ಈ ಒಂದು ವಿಷಯಕ್ಕೆ ನಾವು ಅಂತಿಮ ನಿರ್ಧಾರ ಕೊಡದೇ ಇದ್ದರೆ, ಒಂದು ತೀರ್ಪನ್ನು ಕೊಡದೇ ಇದ್ದರೆ ಈ ಸಮಸ್ಯೆ ಇನ್ನೂ ಕೂಡ ಉಲ್ಬಣವಾಗತಕ್ಕಂಥ ಚಿನ್ಹೆಗಳು ನಮಗೆ ಕಂಡು ಬರುತ್ತವೆ ಎನ್ನತಕ್ಕಂಥಾದ್ದು ನಮ್ಮೆಲ್ಲರ ಅನುಭವದ ಮಾತು. ನಾನು ಈ ಸಂದರ್ಭದಲ್ಲಿ ವಿವರಗಳಿಗೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ಸದಸ್ಯರು ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳಿರತಕ್ಕಂಥ ಮಾತಿನಲ್ಲಿ ಅರ್ಥವಿದೆ. ಚರ್ಚೆ ಮಾಡಿದರೆ ವಿವರಗಳು ಗೊತ್ತಾಗುತ್ತವೆ. ಇಲ್ಲಿರತಕ್ಕ ನಮ್ಮ ಸಮಸ್ಯೆ ಏನು ? ನಾವು ಕೇಂದ್ರದ ಬಜೆಟ್‌ನಲ್ಲಿ ಹಲವಾರು ಸೌಲಭ್ಯಗಳು ಸಿಗಬೇಕು, ಸಿಗುತ್ತವೆ ಎಂದು ಏನು ನಿರೀಕ್ಷೆ ಮಾಡುತ್ತಿದ್ದೆವು ಅದು ಸಿಕ್ಕಿದೆಯೇ ಅಥವಾ ಇಲ್ಲವೇ ಎನ್ನತಕ್ಕಂಥಾದ್ದನ್ನು ನೋಡಬೇಕಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿಯ ವ್ಯಾಪ್ತಿಯಲ್ಲಿ ನಾವು ಏನು ಮಾಡುವುದಕ್ಕೆ ಸಾಧ್ಯವಾಗಬಹುದು ಎನ್ನತಕ್ಕಂಥ ವಿಚಾರ ಇದೆ. ಕೇಂದ್ರದಲ್ಲಿ ನ್ಯಾಷನಲ್ ಫ್ರಂಟ್ ಗವರ್ನಮೆಂಟ್ ಏನಿದೆ, ಮಾನ್ಯ ವಿ.ಪಿ. ಸಿಂಗ್‌ರವರ ಸರ್ಕಾರ ಏನಿದೆ, ಅವರೇ ನಿನ್ನೆ ಇಟ್ಟಿರತಕ್ಕಂಥ ಆ ಕೇಂದ್ರದ ಆಯವ್ಯಯ ಪತ್ರದಲ್ಲಿ ಈ ವಿಚಾರವನ್ನು ಸ್ಪಷ್ಟ ಪಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನೂ ಕೂಡ ಹಿಂದೆ ಈ ಸದನದಲ್ಲಿ ಮಾತನಾಡುವಾಗ ಈ ವಿಚಾರ ಹೇಳಿದ್ದೇನೆ. ರೈತರ ಸಾಲ ಮನ್ನಾ ಮಾಡತಕ್ಕಂಥ ವಿಚಾರದಲ್ಲಿ ಯಾರದೂ ಎರಡನೆಯ ಅಭಿಪ್ರಾಯವಿಲ್ಲ. ಕೆಲವು ಕಾರಣಗಳು ಇರಬಹುದು. ಕೆಲವು ಸಾರಿ ಇದರ ಬಗ್ಗೆ ಚರ್ಚೆಯಾಗಿದೆ, ಭಿನ್ನಾಭಿಪ್ರಾಯ ಇರತಕ್ಕದ್ದು ಸಹಜ. ಆದರೆ ಒಂದು ಸಾರಿ ಸಾಲವನ್ನು ಮನ್ನಾ ಮಾಡತಕ್ಕಂಥ ನಿರ್ಧಾರವನ್ನು ಅಂದರೆ ಎಷ್ಟಾರಮಟ್ಟಿನ ಯಾವ ರೀತಿ ಸಾಲವನ್ನು ನಾವು ಮನ್ನಾ ಮಾಡಬೇಕು ಎನ್ನುವ ವಿಚಾರದಲ್ಲಿ ಒಂದು ಅಂತಿಮ ನಿರ್ಧಾರಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಬರತಕ್ಕಂಥಾ ಅವಶ್ಯಕತೆ ಇದೆ. ಇದು ನನ್ನ ಸ್ಪಷ್ಟವಾಗಿರತಕ್ಕಂಥ ಅಭಿಪ್ರಾಯ. ಕೇಂದ್ರ ಸರ್ಕಾರ ನಿನ್ನೆ ಇಟ್ಟಿರತಕ್ಕಂಥ ಬಜೆಟ್‌ನಲ್ಲಿ ಬಹಳ ದೊಡ್ಡ ಉತ್ತರವನ್ನು ಈ ಸಮಸ್ಯೆಗೆ ಕೊಡಬಹುದು ಎಂದು ನಾವು ನಿರೀಕ್ಷೆ ಮಾಡಿದ್ದೆವು, ಅದಕ್ಕೆ ಸಂಪೂರ್ಣ ಉತ್ತರ ಸಿಕ್ಕಿಲ್ಲ ಎನ್ನತಕ್ಕಂಥ ಮಾತಂತೂ ನಿಜ. ಅದನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ನಾವೂ ಕೂಡ ಅದನ್ನು ಓದಿದ್ದೇವೆ. ಇಪತ್ತು ಸರ್ಕಾರಿ ಕ್ಷೇತ್ರದಲ್ಲಿರತಕ್ಕಂಥ ಬ್ಯಾಂಕುಗಳು ಏನಿವೆ ಆ ಬ್ಯಾಂಕುಗಳಿಗೆ ಸಂಬಂಧಪಟ್ಟಹಾಗೆ ಸಾಲ ಮನ್ನಾ ಮಾಡತಕ್ಕ ವಿಚಾರದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ಒಬ್ಬ ವ್ಯಕ್ತಿಯ ಸಾಲದ ಬಗ್ಗೆ ಆ ಅವರು ಮಾತನಾಡಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿರತಕ್ಕಂಥ ಸಾಲದ ಬಗ್ಗೆ ಮುಂದೆ ನಾವು ಕಾರ್ಯಕ್ರಮಗಳನ್ನು ರೂಪಿಸುತ್ತೇವೆ, ರಾಜ್ಯ ಸರ್ಕಾರದವರು ತಮ್ಮ ವಿಚಾರಗಳನ್ನು ತಿಳಿಸಿ ಎನ್ನತಕ್ಕಂಥ ಅಭಿಪ್ರಾಯ ಇದ್ದರೆ ಸಾಮಾನ್ಯವಾಗಿ ಅವರ ಕಳಕಳಿ ಎಷ್ಟು ಇದೆ ಎಂದು ನಮಗೆ ಗೊತ್ತಾಗುತ್ತದೆ. ನಾನು ಇವತ್ತು ಪತ್ರಿಕೆಯಲ್ಲಿ ನೋಡಿದೆ. ಅದರಲ್ಲಿ ವಿವರಗಳು ಸ್ಪಷ್ಟವಾಗಿ ಇಲ್ಲ. ಆದರೆ ಅವರು ೧೦ ಸಾವಿರ ರೂಪಾಯಿವರೆಗೆ ಇರತಕ್ಕಂಥ ಸಾಲವನ್ನು ಸರ್ಕಾರಿ ಕ್ಷೇತ್ರ--ಸ್ವಾಮ್ಯದಲ್ಲಿರತಕ್ಕ ನ್ಯಾಷನಲೈಸ್ ಬ್ಯಾಂಕ್ಸ್ ಏನಿವೆ ಆ ಸಾಲದಲ್ಲಿ ನಾವು ಎಷ್ಟು ರಿಯಾಯಿತಿ ಕೊಡುತ್ತೇವೆ ಎನ್ನತಕ್ಕಂಥ ಅಂಕಿಅಂಶಗಳನ್ನೂ ಕೂಡ ಕೊಟ್ಟಿದ್ದಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮರೆತರು ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಒಂದು ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಅದನ್ನು ತಾವು ನೋಡಬಹುದು, ಒಂದು ಸಾವಿರ ಕೋಟಿ ಪ್ರಾವಿಜನ್ ಮಾಡಿಕೊಂಡಿದ್ದೇವೆ ಅಂದರೆ ಅದರ ಅರ್ಥವೇನು ? ಒಬ್ಬ ವ್ಯಕ್ತಿಯು ೧೦ ಸಾವಿರ ರೂಪಾಯಿ ಒಳಗಡೆ ಇರತಕ್ಕಂಥ ಸಾಲವನ್ನು ಮನ್ನಾ ಮಾಡಿದರೆ ಅಂದರೆ ನ್ಯಾಷನಲೈಸ್ಡ್ ಬ್ಯಾಂಕ್ಸ್ ಮತ್ತು ಸಹಕಾರಿ ಕ್ಷೇತ್ರದ್ದು ಸೇರಿ ೧೦ ಸಾವಿರ ಕೋಟಿ ರೂಪಾಯಿ ಸಾಲ ಮನ್ನಾ ಮಾಡಬೇಕಾಗುತ್ತದೆ. ಸುಮಾರು ೧೪ ಸಾವಿರ ಕೋಟಿ ಇರತಕ್ಕ ಸಾಲವನ್ನು ಮನ್ನಾ ಮಾಡಬೇಕೆಂಬ ಉತ್ತರವನ್ನು ಮಾನ್ಯ ಪ್ರಧಾನಿ ವಿ.ಪಿ. ಸಿಂಗ್‌ರವರು ಭಾಗವಹಿಸಿದ್ದ ರೈತರ ಸಭೆಯಲ್ಲಿಟ್ಟಾಗ, ಸಹಕಾರ ಕ್ಷೇತ್ರ ಮತ್ತು ಸರ್ಕಾರಿ ಕ್ಷೇತ್ರ ಎರಡು ಸೇರಿ ಸುಮಾರು ೧೬ ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಅವರು ಆಡಿದರು. ನಾನು ಅವರ ಕಳಕಳಿಯನ್ನು ಖಂಡಿಸಬೇಕೆನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ.

ಅವರ ಕಳಕಳಿ ಸಾಬೀತಾಗಬೇಕಾಗಿದೆ. ಸರ್ಕಾರಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಸಾವಿರ ಕೋಟಿ ಪ್ರಾವಿಷನ್‌ನ್ನು ಸೀಮಿತಗೊಳಿಸಿದರೆ ಸಮಸ್ಯೆ ಮತ್ತೆ ಉಲ್ಬಣವಾಗುವುದಕ್ಕೆ ಕೇಂದ್ರ ಸರ್ಕಾರವೇ ಅವಕಾಶ ಮಾಡಿಕೊಟ್ಟಂತಾಗುತ್ತದೆ ಇದರ ಬಗ್ಗೆ ಕೇಂದ್ರ ಸರ್ಕಾರ ತನ್ನ ಸ್ಪಷ್ಟವಾದ ನಿಲುವು ಏನು ಎಂಬುದನ್ನು ತಿಳಿಸಬೇಕು. ಸರ್ಕಾರಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಸಾವಿರ ಕೋಟಿ ರೂಪಾಯಿಗೆ ಪ್ರಾವಿಷನ್ ಮಾಡಿಕೊಂಡಿದ್ದರೆ, ಸಹಕಾರಿ ಕ್ಷೇತ್ರದ ಸಾಲವನ್ನು ಮಜಾ ಮಾಡುವುದಕ್ಕೋಸ್ಕರ ಕೊನೆಯ ಪಕ್ಷ ಬಜೆಟ್‌ನಲ್ಲಿ ಇಷ್ಟು ಸಾವಿರ ಕೋಟಿ ರೂಪಾಯಿ ಪ್ರಾವಿಷನ್ ಮಾಡಿದ್ದೇವೆಂದು ಹೇಳಿದ್ದರೆ ನಿಜವಾಗಿಯೂ ಅವರ ಕಳಕಳಿ ಸ್ಪಷ್ಟವಾಗಿ ಸಾಬೀತಾಗುತ್ತಿತ್ತು. ಆದರೆ, ಕೇಂದ್ರದ ಮಾನ್ಯ ಹಣಕಾಸಿನ ಸಚಿವರೂ ಆದ ಮಧುದಂಡವತೆಯವರು ಸ್ಪಷ್ಟವಾಗಿ ಇಡಬೇಕಾಗಿದ್ದನ್ನು ಹೇಳಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಾದ ಡಿ. ಬಿ. ಚಂದ್ರೇಗೌಡರು ಹೇಳಿದ ವಿಚಾರ ಚರ್ಚೆಗೆ ಒಳಪಡತಕ್ಕ ವಿಚಾರ. ಸಾಲ ಮನ್ನಾ ಮಾಡುವುದನ್ನು ಕೇಂದ್ರ ಸಂಪೂರ್ಣವಾಗಿ ವಹಿಸಿಕೊಳ್ಳಬೇಕು ಎಂಬ ಬಗ್ಗೆ ಒಂದು ಅಭಿಪ್ರಾಯ ಇದೆ. ಮತ್ತೊಂದು ಅಭಿಪ್ರಾಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸೇರಿ ಎಷ್ಟರಮಟ್ಟಿಗೆ ಯಾವ ಯಾವ ಸಾಲವನ್ನು ವಹಿಸಿಕೊಳ್ಳಬೇಕೆಂಬ ವಾದವೂ ಇದೆ. ಇವತ್ತು ನಮಗೆ ಇರತಕ್ಕ ಹಣಕಾಸಿನ ಪರಿಸ್ಥಿತಿಯಲ್ಲಿ ನಾವು ನಿರ್ವಹಣೆ ಮಾಡತಕ್ಕ ಶಕ್ತಿಯನ್ನು ಪಡೆದಿದ್ದೇವೆಯೇ ಎನ್ನುವ ಪ್ರಶ್ನೆ ಇದೆ. ಇವತ್ತು ಒಟ್ಟಾರೆ ರೈತರ ಸಾಲ ೩೬೦ ಕೋಟಿ ಇದೆ. ಕರಾರುವಕ್ಕಾಗಿ ಹೋದರೆ, ನೀರಾವರಿ ಪ್ರದೇಶ ಮತ್ತು ಒಂದೇ ಮನೆಯಲ್ಲಿ ೫-೧೦ ಜನ ತೆಗೆದುಕೊಂಡಿರುವ ಸಾಲವನ್ನು ಮಜಾ ಮಾಡಿದರೆ, ೩೬೦ ಕೋಟಿ ಬಗ್ಗುವುದಿಲ್ಲ, ಸ್ವಲ್ಪ ಕಡಿಮೆಯಾಗುತ್ತದೆ. ನಾನು ಇದರ ವಿವರಕ್ಕೆ ಹೋಗುವುದಿಲ್ಲ. ೩೦–೩೫ ಹಾಗೂ ೫೦ ಪರ್ಸೆಂಟ್ ರಾಜ್ಯ ಸರ್ಕಾರ ಭರಿಸಬೇಕಾಗಬಹುದು. ಈ ಒಂದು ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಇರಬಹುದು, ಸಹಕಾರಿ ಕ್ಷೇತ್ರದ ಸಾಲ ಇರಬಹುದು. ರಾಜ್ಯ ಸರ್ಕಾರ ರೈತರ ಪರವಾಗಿ ವಹಿಸಿಕೊಳ್ಳಬೇಕಾದ ಮೊತ್ತವನ್ನ ಕೇಂದ್ರ ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು. ಇವತ್ತು ಸ್ಟೇಟ್‌ಮೆಂಟ್ ಕೊಡುಬನ್ನಿ ಎಂದು ಬಜೆಟ್‌ನಲ್ಲಿ ಹೇಳಿದ್ದಾರೆ. ರಾಜ್ಯ ಸರ್ಕಾರ ಎಷ್ಟರಮಟ್ಟಿಗೆ ಸಹಕಾರ ಕ್ಷೇತ್ರದ ಸಾಲವನ್ನು ರೈತರ ಪರವಾಗಿ ರಾಜ್ಯ ಸರ್ಕಾರಗಳ ತಲೆಮೇಲೆ ಇಟ್ಟರೆ, ಫೈನಾನ್ಸ್ ಕಮೀಷನ್ ಮುಂದೆ ಪ್ಲಾನಿಂಗ್ ಕಮೀಷನ್ ಮುಂದೆ ನಮ್ಮ ರಾಜ್ಯದ ಕೇಸನ್ನು ಇಟ್ಟು, ಎಷ್ಟು ಹಣವನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಭರಿಸುತ್ತದೆ ಇಲ್ಲವೇ ತುಂಬಿಕೊಡುತ್ತದೆ ಎನ್ನುವ ವಿಚಾರವನ್ನು ಬಜೆಟ್ಟಿನಲ್ಲಿ ಹೇಳಿಬೇಕಾಗಿತ್ತು. ನಾಗೆ ಹೇಳಿದ್ದರೆ, ರಾಜ್ಯ ಸರ್ಕಾರಕ್ಕೆ ಧೈರ್ಯ ಬರುತ್ತಿತ್ತು. ಕೇಂದ್ರದ ಹಣಕಾಸಿನ ಸಚಿವರು ಹಾಗೆ ಹೇಳಿದ್ದರೆ ಇಲ್ಲಿ ರಾಜ್ಯ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು, ಬಜೆಟ್ ಪಾಸಾಗುವುದರೊಳಗೆ ಆಂಕಿಸಂಖ್ಯೆಗಳ ಆಧಾರದ ಮೇಲೆ, ವಾಸ್ತವಾಂಶದಿಂದ ಕೂಡಿದ ಹೇಳಿಕೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ, ಇವತ್ತು ರಾಜ್ಯ ಸರ್ಕಾರ ಆ ಪರಿಸ್ಥಿತಿಗೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ ನಾನು ಬರೀ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಿಲ್ಲ. ಜನತಾದಳದ ಸರ್ಕಾರಗಳು ಯು.ಪಿ. ಯಲ್ಲಿದೆ, ಒರಿಸ್ಸಾದಲ್ಲಿದೆ, ಬಿ.ಜೆ.ಪಿ. ಸರ್ಕಾರಗಳು ಇವೆ, ಸಮ್ಮಿಶ್ರ ಸರ್ಕಾರಗಳು ಇವೆ. ವೆಸ್ಟ್‌ಬೆಂಗಾಲ್, ಕೇರಳ ಸರ್ಕಾರಗಳು ಇರಬಹುದು. ಇವತ್ತು ಈ ಸಮಸ್ಯೆಗೆ ಪರಿಹಾರ ಹುಡುಕತಕ್ಕ ವಿಚಾರದಲ್ಲಿ ಕೇಂದ್ರ ಸರ್ಕಾರದ ಬಜೆಟಿನಲ್ಲಿ ಏನೂ ಹೇಳಿಲ್ಲ ನಾವು ಈಗ ಸಹಕಾರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಾಲ ಮನ್ನಾ ಮಾಡುವ ಬಗ್ಗೆ ಪುನಃ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕಾಗಿರುತ್ತದೆ. ಪ್ಲಾನಿಂಗ್ ಕಮೀಷನ್, ಹಣಕಾಸಿನ ಆಯೋಗ ಫೈನಾನ್ಸ್ ಕಮೀಷನ್ ಮುಂದೆ ಹೋಗಿ ನೀವು ಎಷ್ಟರಮಟ್ಟಿಗೆ ಜವಾಬ್ದಾರಿ ವಹಿಸುತ್ತೀರಿ ಎನ್ನುವ ಅಂಶವನ್ನು ಅವರ ಮುಂದಿಡಬೇಕಾಗುತ್ತದೆ.

ಆದರ ಆರ್ಥ ಕರ್ನಾಟಕ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವ ವಿಚಾರದಲ್ಲಿ ನನ್ನದೊಂದು ಅಭಿಪ್ರಾಯ ಇದ್ದು. ಪರಿಸ್ಥಿತಿ ಹಾಗೆಯೇ ಇದೆ, ಆದರೆ ಎಷ್ಟರ ಮಟ್ಟಿಗೆ ಹೇಗೆ ಎಂದು ವಿಚಾರ ಮಾಡಬಹುದು ಎನ್ನತಕ್ಕದ್ದು ನನ್ನ ವೈಯಕ್ತಿಕ ಅಭಿಪ್ರಾಯ. ಇದಕ್ಕೆ ಏನಾದರೂ ಮಾಡಿ ನಾವು ಈ ಸದನದಲ್ಲಿ ಒಂದು ನಿರ್ಣಯವನ್ನು ಬೇಕಾದರೆ ಮಾಡೋಣ. ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರೋಣ. ಸಹಕಾರಿ ಕ್ಷೇತ್ರದ ಸಾಲವನ್ನು ಕೂಡ ಸೇರಿಸಬೇಕೆಂದು ಹೇಳೋಣ. ಕೇಂದ್ರದಲ್ಲಿ ಅವರ ಬಡ್ಜೆಟ್ ಪಾಸ್ ಆಗುವುದರೊಳಗೆ they must comeout with a true statement covering the loans under co-operative sector. ಅದು ಬರದೇ ಇದ್ದರೆ ಮಾತ್ರ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಪುನಃ that amount to the theory of escapism on the part of the National Front Government at the Centre ಎನ್ನತಕ್ಕದ್ದು ಅದು ನಿರ್ವಿವಾದ ಎಂದು ಹೇಳಿ ತಮಗೆ ವಂದಿಸುತ್ತೇನೆ.

† ಶ್ರೀ ಪೆಚ್. ವಿಶ್ವನಾಥಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈಗ ಮಾತನಾಡಿದಂಥ ನಮ್ಮ ಹಿರಿಯ ಸ್ನೇಹಿತರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಸಾಲ ಮನ್ನಾ ಮಾಡಬೇಕೇ ಬೇಡವೇ ಎಂಬ ಪ್ರಶ್ನೆ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಂತ್ರೋಂದು ಮಾತನ್ನು ಹೇಳಿದರು. ಕೇಂದ್ರ ಸರ್ಕಾರದವರು ತಮ್ಮ ಆಶ್ವಾಸನೆಯಿಂದ ನುಣಚಿಕೊಳ್ಳುವಂಥ ಪ್ರಯತ್ನ ಮಾಡಿದ್ದಾರೆನ್ನುವ ಮಾತನ್ನು ಹೇಳಿದರು. ಆ ಮಾತನ್ನು ಹೇಳುತ್ತಾ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೊಣೆಗಾರಿಕೆಯಿಂದ ನುಣಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಇವೊತ್ತು ಕೇಂದ್ರ ಸರ್ಕಾರದವರು ತಮ್ಮದೇ ಆದಂಥ ರೀತಿಯಿಂದ ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಏನು ಪ್ರಸ್ತಾಪ ಮಾಡಿದ್ದೀರಿ, ಅದು ಬೇರೆ ಪ್ರಶ್ನೆ. ನಾವುನೇರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಈ ಸರ್ಕಾರದನ್ನು ಕೇಳುತ್ತಿರುವುದು ಏನೆಂದರೆ, ತಮ್ಮ ಅಧಿಕಾರ ಅವಧಿಯಲ್ಲಿ, ತಮ್ಮ ಹತೋಟಿಯಲ್ಲಿರತಕ್ಕಂಥ, ಸಹಕಾರಿ ಕ್ಷೇತ್ರದಲ್ಲಿರತಕ್ಕಂಥ ಸಾಲವನ್ನು ಮನ್ನಾ ಮಾಡುವ ಬಗ್ಗೆ ನಿಮ್ಮ ಸರ್ಕಾರದ ನೀತಿ ಏನು ? ನನಗೆ ಒಂದು ಗಾದೆ ಮಾತು ಜ್ಞಾಪಕಕ್ಕೆ ಬರುತ್ತದೆ. ಹಳ್ಳಿಯಲ್ಲಿ ಒಂದು ಗಾದೆ ಮಾತು ಹೇಳುತ್ತಾರೆ, ಏನೆಂದರೆ ಅತ್ತೆ ಆಸ್ತಿಯನ್ನು ಅಳಿಯ ದಾನ ಮಾಡಿದ ಎಂಬಂತೆ ಇವೊತ್ತಿನ ದಿವಸ ನಾವು ತಮ್ಮನ್ನು ಕೇಳಂವುದು ಏನೆಂದರೆ, ತಮ್ಮ ಆಸ್ತಿಯಲ್ಲಿ ತಮ್ಮ ಸಂಪನ್ಮೂಲದಲ್ಲಿ ಸ್ವಲ್ಪ ಭಾಗವನ್ನಾದರೂ ಸಹಕಾರಿಗಳಿಗೆ ಋಣ ಪರಿಹಾರ ಯೋಜನೆಯನ್ನು ರೂಪಿಸುವಾಗ ಕೊಡುವಂಥ ಮನಸ್ಸು ಇದೆಯೇ ಹಾಗೆ ಇದ್ದರೆ ತಮ್ಮ ಯೋಜನೆ ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಪ್ರಸ್ತಾಪ ಮಾಡಿದರು.

ಅಧ್ಯಕ್ಷರು. ಈ ವಿಷಯದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನಿಲುವಳಿ ಸೂಚನೆ ಮೂಲಕ...

ಅಧ್ಯಕ್ಷರು.—ಈಗ ತಾವು ಏನು ಪ್ರಶ್ನೆಗಳನ್ನು ಎತ್ತಿದ್ದೀರಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ, ದಯವಮಾಡಿ ಕುಳಿತುಕೊಳ್ಳಿ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬಗ್ಗೆ ಚರ್ಚೆ ಮಾಡುವುದರ ಬಗೆ ನನ್ನ ಅಭ್ಯಂತರ ಏನೂ ಇತ ಅಡ್ಡಿ ಏನೂ ಇಲ್ಲ, ಚರ್ಚೆ ಮಾಡೋಣ. ತಾವು ಯಾವಾಗ ಸಮಯ ನಿಗದಿ ಮಾಡುತ್ತೀರೋ ಆ ವೇಳೆಗೆ ಚರ್ಚೆಗೆ ನಾವು ತಯಾರಿದ್ದೇವೆ. ಸನ್ಮಾನ್ಯ ಸದಸ್ಯರಾದ ಬಂಗಾರಪ್ಪನವರು ನನ್ನ ಕೆಲಸ ಬಹಳಮಟ್ಟಿಗೆ ಹಗುರ ಮಾಡಿದ್ದಾರೆ ಮತ್ತು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿ ಅವರು ಸ್ಪಷ್ಟೀಕರಣ ನೀಡಿದ್ದಾರೆ. ಈಗ ಮಾನ್ಯ ವಿರೋಧಪಕ್ಷದ ನಾಯಕರು ಒಂದು ಪ್ರಶ್ನೆಯನ್ನು ನನಗೆ ಕೇಳಿದರು. ಸಹಕಾರಿ ಕ್ಷೇತ್ರದ ಸಾಲದ ಜವಾಬ್ದಾರಿ ರಾಜ್ಯ ಸರ್ಕಾರದ್ದೋ ಕೇಂದ್ರ ಸರ್ಕಾರದ್ದೋ ಎಂದು ಬಹುಶಃ ಅವರು ಹೇಳಿದ ಧಾಟಿ ಮೇಲೆ ಕೇಂದ್ರ ಸರ್ಕಾರದ್ದು ಜವಾಬ್ದಾರಿ ಪಬ್ಲಿಕ್ ಸೆಕ್ಟಾರ್ ಬ್ಯಾಂಕು ಮತ್ತು ರೀಜನಲ್ ಬ್ಯಾಂಕಿನಲ್ಲಿರುವಂಥ ರೈತರ ಸಾಲದ ಮೇಲೆ ಸರ್ಕಾರದ ಜವಾಬ್ದಾರಿ ಇತ್ತು. ಅವರು ಅದನ್ನು ನಿರ್ವಹಿಸಿದ್ದಾರೆ. ಈಗ ಸಹಕಾರ ಕ್ಷೇತ್ರದ ಸಾಲದ ಜವಾಬ್ದಾರಿ ರಾಜ್ಯ ಸರ್ಕಾರದ್ದು. ಇದನ್ನು ನೀವು ನಿರ್ವಹಿಸಿರಿ ಎನ್ನುವ ವಿಚಾರವನ್ನು ಹೇಳಿದ್ದಾರೆ. ನಾನು ಅವರಿಗೆ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ. ಸಾಲ ಸಹಕಾರಿ ಕ್ಷೇತ್ರದಲ್ಲಿರಲಿ, ಅದು ರೈತರದ್ದೆ, ಬರೀ ರೈತರದ್ದು ಒಂದೇ ಮಾತನಾಡಲಿಲ್ಲ, ನಮ್ಮ ಕುಶಲಕರ್ಮಿಗಳ ಸಾಲ ಅಂದರೆ ವೀವರ್ಸ್, ಆರ್ಟಿಜಾನ್ಸ್, ಹಳ್ಳಿಗಳಲ್ಲಿ ಸಣ್ಣಸಣ್ಣ ಉದ್ಯೋಗಗಳನ್ನು ಮಾಡುವಂಥವರು ಬರುತ್ತಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂಬುದರ ಬಗ್ಗೆ ತಾವು ವಿಚಾರ ಮಾಡಬೇಕು, ನನ್ನ ಹತ್ತಿರ ಬಹುಶಃ ಇದರ ಬಗ್ಗೆ ಪತ್ರಿಕಾ ಪ್ರಕಟಣೆಗಳು ಏನು ಬಂದಿವೆ ಅದರ ಕಟಿಂಗ್ಸ್ ಇದೆ. ನಂತರ ತಮಗೆ ಬೇಕಾದರೆ ತೋರಿಸುತ್ತೇನೆ. ಸಂಯುಕ್ತ ರಂಗದ ಸರಕಾರ ಯಾವಾಗ ಅಧಿಕಾರಕ್ಕೆ ಬಂದಿದೆಯೋ ಆವತ್ತಿನಿಂದ ಅನೇಕ ಬಾರಿ ಕೇಂದ್ರದ ಹಣಕಾಸು ಮಂತ್ರಿಗಳು ಪ್ರಧಾನಮಂತ್ರಿಗಳು ರೈತರ ಮತ್ತು ಕುಶಲ ಕರ್ಮಿಗಳ ಸಾಲದ ಹೊರೆ ಎಷ್ಟಾಗುತ್ತದೆ, ಕೇಂದ್ರ ಸರಕಾರದ ಮೇಲೆ ಎಷ್ಟು ಹೊರೆ ಯಾಗುತ್ತದೆ ಅನ್ನುವಂಥದ್ದನ್ನು ಆಗಾಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟು ಹೇಳಿದ್ದಾರೆ. ಅಹಮದಾಬಾದಿನಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ರೈತರ ಸಾಲ ಮನ್ನಾ ಆಗಬೆಕಾಗಿದ್ದರೆ ಕನಿಷ್ಠ ೧೩ ಸಾವಿರ ಕೋಟಿ ರೂಪಾಯಿಗಳಷ್ಟು ಸಾಲವನ್ನು ಮನ್ನಾ ಮಾಡಬೇಕಾಗಬಹುದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ೧೩ ಸಾವಿರ ಕೋಟಿ ಎಂದರೆ ಬರೀ ಪಬ್ಲಿಕ್ ಸೆಕ್ಟಾರ್, ರೀಜನಲ್ ಬ್ಯಾಂಕ್‌ನಲ್ಲಿ ಇರುವಂತಹ ರೈತರ ಸಾಲ ಅಲ್ಲ, ಎಲ್ಲಾ ಸಾಲವನ್ನೂ ಸೇರಿಸಿಕೊಂಡು ಹೇಳಿದ್ದಾರೆ. ಕೇಂದ್ರದಲ್ಲಿರುವಂತಹ ಪ್ರಧಾನ ಮಂತ್ರಿಗಳು ಕೂಡ ಇದು ಬಹಳ ದೊಡ್ಡ ಮೊತ್ತ ಇದನ್ನು ಮನ್ನಾ

ಮಾಡಬೇಕೆಂದು ಹೇಳುವುದು ಸುಲಭ ಆದರೆ ಮಾಡುವುದು ಕಷ್ಟ ಎಂದು ಬಹಳ ಸಲ ಹೇಳಿದ್ದಾರೆ. ಅಲ್ಲಿಂದ ಮುಂದಕ್ಕೆ ಹೇಳುವುದಾದರೆ ಆಪೆಕ್ಸ್ ಬ್ಯಾಂಕ್ ಇದೆ ಮತ್ತು ಅದರ ಕೆಳಗೆ ಇರುವಂತಹ ಬ್ಯಾಂಕ್‌ಗಳಲ್ಲಿ ಆಡ್ಮಿನಿಸ್ಟ್ರೇಷನ್ ಕಂಟ್ರೋಲ್ ನಮ್ಮದು. ಅದರ ಹೊರತಾಗಿ ಅವರು ಮಾಡುವಂತಹ ವ್ಯವಹಾರ ಅಲ್ಲಿರುವಂತಹ ದುಡ್ಡು ನಮ್ಮದು ಅಲ್ಲ. ಅಂದರೆ ರಾಜ್ಯ ಸರಕಾರದ್ದು ಅಲ್ಲ. ಅವರಿಗೆ ದುಡ್ಡನ್ನು ಕೊಡುವವರು ನಬಾರ್ಡ್‌ನವರು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕೇಂದ್ರ ಸರ್ಕಾರದ್ದು. ಬ್ಯಾಂಕ್‌ನವರು ಸಾಲ ಕೊಡುತ್ತಾರೆ ನಿಜ. ಆದರೆ ಸ್ವಾಭಾವಿಕವಾಗಿ ಸಾಲ ಕೊಡುವವರು ಕೂಡು ಎಂದರೆ ಕೂಡಬೇಕು ಏಳು ಎಂದರೆ ಏಳಬೇಕು ಅಂತಹ ಪರಿಸ್ಥಿತಿಗೆ ನಬಾರ್ಡ್‌ನವರು ಸಾಲ ತೆಗೆದುಕೊಳ್ಳುವವರನ್ನು ತಂದಿದ್ದಾರೆ. ಎಲ್ಲಿಯವರೆಗೆ ಇಂತಹ ಪರಿಸ್ಥಿತಿಗೆ ತಂದಿದಾ ರೆ ಎಂದರೆ ಇಂಟರೆಸ್ಟ್ ಎಷ್ಟು ವಸೂಲು ಮಾಡಬೇಕು ಅನ್ನುವುದನ್ನು ಕೂಡ ಅವರೇ ನಿರ್ಣಯ ಮಾಡುತ್ತಾರೆ. ನಾವೇನಾದರೂ ಅವರು ಹೇಳಿದ್ದಕ್ಕೆ ವಿರುದ್ಧವಾಗಿ ನಿರ್ಣಯ ಮಾಡಿದರೆ ಮುಂದೆ ಸಾಲ ಕೊಡುವ ಹಾಗೇ ಇಲ್ಲ, ಬಂದ್ ಮಾಡುತ್ತಾರೆ. ಈ ಎಲ್ಲ ಅಧಿಕಾರಗಳೂ ಕೂಡ ಸಾಲ ಕೊಡುವವರಿಗೆ ಇದೆ. ಸಾಲವನ್ನು ಎಷ್ಟು ಬಡ್ಡಿದರದ ಮೇಲೆ ಕೊಡಬೇಕೆಂಬುದನ್ನು ಕೂಡ ಅವರೇ ನಿರ್ಣಯ ಮಾಡುತ್ತಾರೆ ಮತ್ತು ಮುಂದಿನ ಸಲ ಹೇಗೆ ಕೊಡುತ್ತಾರೆ ಹೇಗೆ ವಸೂಲು ಮಾಡಬೇಕೆಂಬುದನ್ನು ಮತ್ತು ಪ್ರತಿಯೊಂದನ್ನೂ ಕೂಡ ಅವರೇ ನಿರ್ಣಯ ಮಾಡುತ್ತಾರೆ. ನಬಾರ್ಡ್‌ನವರು ಪ್ರತಿಯೊಂದಕ್ಕೂ ಹೆಜ್ಜೆ ಹೆಜ್ಜೆಗೂ ಈ ದಾರಿಯಲ್ಲಿ ನಡೆಯಿರಿ ಎಂದು ಪ್ರತಿಯೊಂದಕ್ಕೂ ಕೂಡ ಗೈಡ್‌ಲೈನ್ಸ್ ನೀಡುತ್ತಾ ಅವರೆ ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿದ್ದಾರೆ. ಅದರ ಅರ್ಥ ಏನು ಅಂದರೆ, ದುಡ್ಡು ನಬಾರ್ಡ್‌ನವರದ್ದು, ನಾವು ಅವರಿಗೆ ಮತ್ತೆ ದುಡ್ಡನ್ನು ವಾಪಸ್ ಕೊಡಬೇಕು. ನಮ್ಮ ಕೋ-ಆಪರೇಟೀವ್ ಸೆಕ್ಟಾರ್‌ನ ಕೆಲಸ ಏನು ಅಂದರೆ ಅವರಿಂದ ದುಡ್ಡು ತರುವುದು ಹಂಚುವುದು. ಮತ್ತೆ ಸಾಲವನ್ನು ವಸೂಲಿ ಮಾಡಿ ಅವರಿಗೆ ಡಿಪಾಸಿಟ್ ಮಾಡುವುದು ಮತ್ತೆ ಮುಂದಿನ ವರ್ಷ ಎಷ್ಟು ಸಾಲವನ್ನು ತರಬೇಕಾಗುತ್ತದೆಂಬುದನ್ನು ವಿಚಾರ ಮಾಡುವುದು ಇಷ್ಟು ಪಾತ್ರ ಇದೆಯೇ ಹೊರತಾಗಿ ಇದಕ್ಕಿಂತ ಹೆಚ್ಚಿನ ಪಾತ್ರ ನಮ್ಮದು ಇಲ್ಲ. ಸಹಕಾರಿ ಕ್ಷೇತ್ರದಲ್ಲಿರುವಂತಹ ಸಾಲವೇ ಆಗಲೀ ಬ್ಯಾಂಕ್‌ಗಳಲ್ಲಿರುವಂತಹ ಸಾಲವೇ ಆಗಲೀ ಇಲ್ಲವೇ ರೈತರ ಸಾಲವೇ ಆಗಲೀ, ಕಂಶಲಕರ್ಮಿಗಳ ಸಾಲವೇ ಆಗಲೀ ಎಲ್ಲಾ ಸಾಲದ ಜವಾಬ್ದಾರಿ ಕೇಂದ್ರ ಸರ್ಕಾರದ್ದೇ ಹೊರತಾಗಿ ರಾಜ್ಯ ಸರ್ಕಾರದ್ದು ಅಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ತಮ್ಮ ಮುಂದೆ ಹೇಳುತ್ತಿದ್ದೇನೆ. ಸಾಲ ಮನ್ನಾ ಮಾಡುವುದರ ಬಗ್ಗೆ ಒಂದು ಯೋಜನೆಯನ್ನು ರಾಜ್ಯ ಸರಕಾರದವರು ಹಾಕಿದರೆ ನಾವು ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಹಾಗೂ ಎಷ್ಟರ ಮಟ್ಟಿಗೆ ಸಹಾಯ ಮಾಡಬಹುದು ಎಂಬ ಬಗ್ಗೆ ಹೇಳುತ್ತೇವೆಂದು ಕೇಂದ್ರ ಸರಕಾರ ದವರು ಹೇಳಿದ್ದಾರೆ. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಅವರು ಬಜೆಟ್ ಭಾಷಣವನ್ನು ಮಾಡಿದ್ದಾರೆ ಬೇರೆ ಕಡೆ ಕೂಡ ಭಾಷಣ ಮಾಡಿದ್ದಾರೆ ನಾವು ಕೂಡ ಬೇಕಾದರೆ ದಿನಗಟ್ಟಲೆ ಭಾಷಣ ಮಾಡಬಹುದು. ಆದಕ್ಕೆ ಮಾನ್ಯ ಸಭಾಧ್ಯಕ್ಷರು ಒಪ್ಪಿಗೆ ಕೊಟ್ಟಿದ್ದಾರೆ ಚರ್ಚೆ ಮಾಡೋಣ. ಈಗ ನಾವು ಆ ಯೋಜನೆಯನ್ನು ತಯಾರು ಮಾಡಿ ಆ ಬಗ್ಗೆ ಹೇಳಬೇಕೆನ್ನುವ ಸಮಯದಲ್ಲಿ ಮಧ್ಯ ಪ್ರದೇಶ ಸರಕಾರದ ಜೊತೆಯಲ್ಲಿ ನಾವು ಸಂಪರ್ಕ ಮಾಡಿದೆವು ಮತ್ತು ಅದೇ ರೀತಿಯಲ್ಲಿ ಹರಿಯಾಣಾ ದವರ ಜೊತೆಯಲ್ಲಿ ದೂರವಾಣಿಯ ಮೂಲಕ ಸಂಪರ್ಕ ಮಾಡಿದರೆ ಅವರು ಏನು ಹೇಳುತ್ತಾರೆಂದರೆ we are also in a confused state of affairs, we do not know about it. ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ.

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಇದು ಹಗುರವಾದ ಪ್ರಶ್ನೆ ಅಲ್ಲ. ಇದು ಚಿಟಿಕೆ ಹಾಕುವುದರೊಳಗೆ ಮಾಡಿ ಮುಗಿಸುವಂಥದ್ದಲ್ಲ. ಮಾನ್ಯ ನಂಜುಂಡಸ್ವಾಮಿಯವರೂ ಹಾಗೂ ಇನ್ನೂ ಅನೇಕ ಮಾನ್ಯ ಸದಸ್ಯರು ೩೫೦ ಕೋಟಿ ರೂಪಾಯಿ ಏನು ಮಹಾ ಎಂದು ಹೇಳಿದರು. ಸ್ವಾಮಿ, ನಮ್ಮ ಬಜೆಟ್ ಕಾಪಿ ನಿಮ್ಮ ಮುಂದಿದೆ. ಅದರಲ್ಲಿ ಎಲ್ಲವನ್ನೂ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ನಾವು ಎಲ್ಲಿಂದ ಹಣವನ್ನು ತರಬೇಕು. ಕೃಷ್ಣಾ ಯೋಜನೆಗೆ ಸಂಬಂಧಪಟ್ಟಂತೆ ಕೃಷ್ಣಾರ್ಪಣ ಎಂದು ಹೇಳಬೇಕೋ. ಕಾವೇರಿ ಯೋಜನೆಗೆ ಸಂಬಂಧಪಟ್ಟಂತೆ ಕೃಷ್ಣಾರ್ಪಣ ಎಂದು ಹೇಳಬೇಕೊ. ರೈತರ ಪಂಪುಸೆಟ್ಟುಗಳಿಗೆ ಪವರ್ ಇಲ್ಲ ಎಂದು ಒಂದೇ ಸಮನೆ ನಾವು ಬಡಿದುಕೊಳ್ಳುತ್ತಿರುವುದರಿಂದ ಇದಕ್ಕೆ ನಾವು ಕೃಷ್ಣಾರ್ಪಣ ಎಂದು ಹೇಳಬೇಕೋ ನೀವೇ ಹೇಳಿ. ನಾವು ಎಲ್ಲಿಂದ ೩೫೦ ಕೋಟಿ ಹಣವನ್ನು ತರಬೇಕೆಂಬುದನ್ನು ನೀವೇ ಹೇಳಬೇಕು. ಹೇಳುವುದು ಬಹಳ ಸುಲಭ. ಆದರೆ ನೀವು ಹೇಳುವಾಗ ಕನ್‌ಸ್ಟ್ರಕ್ಟೀವ್ ಆಗಿ ಹೇಳಬೇಕು. ಈ ಯೋಜನೆಗಳನ್ನು ಬಿಟ್ಟರೂ ಚಿಂತೆ ಇಲ್ಲ ೩೫೦ ಕೋಟಿ ರೂಪಾಯಿಗಳ ಸಾಲವನ್ನು ಇಂಥಿಂಥ ಕಡೆಯಿಂದ ತೆಗೆದುಕೊಂಡು ಬರೋಣವೆಂದು ಹೇಳುವುದಾದರೆ ಅದರ ಬಗ್ಗೆ, ಯಾವುದಾದರೂ ಕನ್‌ಸ್ಟ್ರಕ್ಟೀವ್ ಆದ ಸಲಹೆಯನ್ನು ಕೊಡಿ. ಅದನ್ನಾದರೂ ನಾವು ಯೋಚನೆ ಮಾಡೋಣ, ಕೇವಲ

ಕರ್ನಾಟಕದವರು ಮಾತ್ರ ಯೋಜನೆಯನ್ನು ತಯಾರು ಮಾಡಿಕೊಂಡು ಬನ್ನಿ ಎಂದು ಕೇಂದ್ರದ ಮಂತ್ರಿಗಳು ಹೇಳಿಲ್ಲ. ಅವರು ಇಡೀ ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ಹೇಳಿದ್ದಾರೆ. ನಾವು ಯಾವ ರೀತಿ ಸಹಾಯ ಮಾಡಬಹುದು, ಎಷ್ಟು ಸಹಾಯ ಮಾಡಬಹುದು ಎಂಬುದನ್ನೆಲ್ಲಾ ಅವರು ಹೇಳಿದ್ದಾರೆ. ಆದ್ದರಿಂದ ನಾವೂ ಯೋಜನೆಯನ್ನು ತಯಾರು ಮಾಡಬೇಕು. ಆಂಧ್ರದವರೂ ಮಾಡುತ್ತಾರೆ, ಅದೇ ರೀತಿ ತಮಿಳುನಾಡು, ಕೇರಳ, ಮಧ್ಯಪ್ರದೇಶ ಬಿಹಾರ, ಒರಿಸ್ಸಾ, ಗುಜರಾತ್ ಹೀಗೆ ಎಲ್ಲ ರಾಜ್ಯಗಳವರೂ ಯೋಜನೆಗಳನ್ನು ಮಾಡುತ್ತಾರೆ. ಅವರು ಯಾವ ರೀತಿ ಯೋಜನೆ ಮಾಡುತ್ತಾರೆಂಬುದನ್ನು ನೋಡೋಣ. ನಂತರ ನಾವು ಯಾವ ರೀತಿ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನೋಡೋಣ. ಇದರ ಬಗ್ಗೆ ಚರ್ಚೆ ಮಾಡುವಾಗ ಆ ಚರ್ಚೆಯಲ್ಲಿ ಏನು ವಿಚಾರಗಳು ಬರಬಹುದೆಂಬುದನ್ನೂ ಈ ಚೌಕಟ್ಟಿನಲ್ಲಿ ಸೇರಿಸಿ ಪರಿಶೀಲನೆ ಮಾಡುತ್ತೇವೆ. ಈ ಮಧ್ಯೆ ವಸೂಲಾತಿಯನ್ನು ನಿಲ್ಲಿಸಿ ಎಂದು ನೀವು ಹೇಳುತ್ತೀರಿ. ನಾನು ಅನೇಕ ಸಾರಿ ಹೇಳಿದ್ದೇನೆ. ವಸೂಲಾತಿ ಎಂಬುದು ಕೇವಲ ಪೇಪರ್‌ಮೇಲೆ ಮಾತ್ರ ಇದೆಯೇ ಹೊರತು ನಿಜವಾಗಿ ವಸೂಲಿ ಆಗುತ್ತಿಲ್ಲ. ನಮಗೆ ಯಾರೂ ಹಣವನ್ನು ಕೊಡುತ್ತಿಲ್ಲ. ಅವರಾಗಿಯೇ ಕೊಟ್ಟರೆ ಮಾತ್ರ ನಾವು ತೆಗೆದುಕೊಳ್ಳುತ್ತೇವೆ. ನೀವು ಕೊಡುತ್ತೀರೋ ಇಲ್ಲವೋ ಎಂದು ಕುತ್ತಿಗೆ ಹಿಡಿದು ತೆಗೆದುಕೊಳ್ಳುವುದಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಿಮ್ಮ ಭಾಗದಲ್ಲಿ ಕುಳಿತಿರತಕ್ಕ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್‌ನವರು ಹೇಳುತ್ತಾರೆ, ಏನ್ರಿ ಇಂಥ ಪರಿಸ್ಥಿತಿ ಬಂತು ಯಾರೂ ಸಾಲವನ್ನೇ ಕೊಡುವುದಿಲ್ಲ, ನಾವು ಯಾವರೀತಿ ಸಾಲವನ್ನು ವಸೂಲ್ಮಾಡಬೇಕು ಎಂದು. ಮೇಲ್ಮನೆಯಲ್ಲಿರತಕ್ಕ ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರು ಹೇಳುತ್ತಾರೆ, ಯಾರೂ ಕೂಡ ಹಣವನ್ನೇ ಕೊಡುತ್ತಿಲ್ಲ, ಸಾಲ ವಸೂಲಾಗುತ್ತಿಲ್ಲ. ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವತ್ತು ಒತ್ತಾಯದಿಂದ ನಾವು ವಸೂಲ್ಮಾಡುವುದಕ್ಕಾಗುವುದಿಲ್ಲ. ಅವರಾಗಿಯೇ ಕೊಟ್ಟರೆ ತೆಗೆದುಕೊಳ್ಳೋಣ, ಇಲ್ಲದಿದ್ದರೆ ಸುಮ್ಮನಿರೋಣ ಎಂದು ಇದ್ದೇವೆ. ಆದರೆ ನೀವು ಕೇಳಿ ಹಾದು, ನೀವು ಏತಕ್ಕೆ ವಸೂಲ್ಮಾಡುವುದಿಲ್ಲ ಎಂದು, ನಾನು ತಮಗೆ ಹೇಳುತ್ತೇನೆ, ನಾವು ಇವತ್ತು ಒಂದು ಧರ್ಮಸಂಕಟದಲ್ಲಿ ಸಿಕ್ಕಿದ್ದೇವೆ ನಾವು ಇದನ್ನು ಹೇಳಿದರೆ ನಂಜೆ ನಬಾರ್ಡ್‌ನವರು ನಮ್ಮ ಕತ್ತು ಹಿಡಿಯುತ್ತಾರೆ, ಮಾನ್ಯ ಯಡಿಯೂರಪ್ಪನವರು ಹೇಳಿದರೆ ನಾನು ಈಗಲೂ ಸ್ಟೇಟ್‌ಮೆಂಟನ್ನು ಮಾಡುವುದಕ್ಕೆ ತಯಾರಿದ್ದೇನೆ. ನಬಾರ್ಡ್‌ನಿಂದ ರೀ ಫೈನಾನ್ಸ್ ಮಾಡಿಸುವ ಜವಾಬ್ದಾರಿ ನನಗೆ ಇರಲಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರೆ ನಾನು ಈಗಲೇ ಸ್ಟೇಟ್‌ಮೆಂಟ್ ಕೊಡುತ್ತೇನೆ. ನಬಾರ್ಡ್‌ನವರನ್ನು ಮೈಮೇಲೆ ಹಾಕಿಕೊಳ್ಳುವುದು ಬೇಡ, ನಬಾರ್ಡ್‌ನವರ ಡೈರೆಕ್ಷನ್ ಅನ್ನು ಉದ್ದೇಶಪೂರ್ವಕವಾಗಿ ವೈಯಲೇಟ್ ಮಾಡಿದ್ದೇವೆಂದು ಹೇಳುವುದು ಬೇಡ ಮತ್ತು ಕೇಂದ್ರ ಸರ್ಕಾರದವರೂ ಕೂಡ ಈ ರೀತಿ ರಿಕವರಿಯನ್ನು ಸ್ಟಾಪ್ ಮಾಡಿದ್ದೇವೆಂದು ಹೇಳುವುದು ಬೇಡ ಅಂತ ನಾವು ಹೇಳಿದ್ದೇವೆ. ಸಾಲ ಕೊಡುವುದಕ್ಕೆ ನಾವು ರಿಕವರಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದೇವೆಯೆ ಹೊರತು ರಿಕವರಿ ಆಗುತ್ತಿಲ್ಲ. ಇದು ಕೇವಲ ಕಾಗದದ ಮೇಲೆ ಮಾತ್ರ ಇದೆ. ಅವರಾಗಿಯೇ ಕೊಟ್ಟರೆ ನಾವು ತೆಗೆದುಕೊಳ್ಳುತ್ತೇವೆ ಇಲ್ಲದಿದ್ದರೆ ಇಲ್ಲ. ಸಾಲ ವಸೂಲಾತಿ ೧೦ ಸಾವಿರಕ್ಕಿಂತ ಮೇಲಿರತಕ್ಕ ಪ್ರಕರಣಗಳಲ್ಲಿ ಇರಬಹುದೇ ಹೊರತು ೧೦ ಸಾವಿರಕ್ಕಿಂತ ಕಡಿಮೆ ಇರತಕ್ಕ ಸಾಲಗಳ ವಸೂಲಾತಿ ಪ್ರಕರಣಗಳು ಇಲ್ಲ. ಒಂದು ವೇಳೆ ಅಂಥಾದ್ದು ಯಾವುದಾದರೂ ಇದ್ದರೆ ಅವನ್ನು ನನಗೆ ತಿಳಿಸಿದರೆ ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಟೆಲಿಫೋನ್ ಮಾಡಿ ತಿಳಿಸುತ್ತೇನೆ. ಇದು ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲವೆ? ರೈತರಿಗೆ ಗೊತ್ತಾಗುವುದಿಲ್ಲವೆ? ಇವತ್ತು ಇದು ಒಂದು ಸಣ್ಣ ವಿಚಾರ. ಆದರೆ ವಿರೋಧ ಪಕ್ಷದ ನಾಯಕರು ಹೇಳುತ್ತಿರತಕ್ಕ ವಿಚಾರ ಬಹಳ ಗಹನವಾದುದು. ೩೫೦ ಕೋಟಿ ರೂಪಾಯಿಗಳನ್ನು ನಾನು ಯಾವುದರಿಂದ ತೆಗೆದಿಡಬೇಕು. ಯಾವ ಬಾಜೆನಿಂದ ಕತ್ತರಿಸಬೇಕು. ಕೇಂದ್ರ ಸರ್ಕಾರದವರು ನಮಗೆ ಎಷ್ಟು ಕೊಡುತ್ತಾರೆ ಎಂಬುದನ್ನು ನಾವು ಯೋಚನೆ ಮಾಡಬೇಕು ಮಾನ್ಯ ಯಡಿಯೂರಪ್ಪನವರು ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಿಗೆ ಯಾವ ರೀತಿ - ಕಾಂಪನ್‌ಸೇಟ್ ಮಾಡುತ್ತಾರೋ ಅದೇ ರೀತಿ ನಿಮಗೂ ಕಾಂಪನ್‌ಸೇಟ್ ಮಾಡುತ್ತಾರೆಂದು ಹೇಳಿದರು.

ಶ್ರೀ ಬಿ ಎಸ್. ಯಡಿಯೂರಪ್ಪ — ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಯಾವ ರೀತಿ ೧೦ ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳಿದ್ದಾರೆ. ಅದೇರೀತಿ ರಾಜ್ಯ ಸರ್ಕಾರಕ್ಕೂ ಅನ್ವಯವಾಗುವ ರೀತಿಯಲ್ಲಿ ಮಾಡಿ ಒಂದು ಪ್ರಪೋಸಲ್ ತಂದರೆ ನಾವು ಸಹಾಯವನ್ನು ಮಾಡುತ್ತೇವೆಂದು ಕೇಂದ್ರದವರು ಹೇಳಿದ್ದಾರೆ. ತಿರುಗು ಮುರುಗು ಅವನ್ನೇ ನಾನು ಮಾತನಾಡುತ್ತಿದ್ದರೆ ತಾವು ಕ್ಷಮಿಸಬೇಕು. ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಹಾಗೂ ಎಲ್ಲರಿಗೂ ಗೊತ್ತಿರುವ ಸಂಗತಿ ಏನೆಂದರೆ, ಈ ಸಾಲವನ್ನು ನಬಾರ್ಡ್ ಮೂಲಕ ಕೊಡುತ್ತಿದ್ದಾರೆ. ಇವತ್ತು ಬ್ಯಾಂಕ್ ಸಾಲ ಮನ್ನಾ ಮಾಡಿ ನಬಾರ್ಡ್‌ಗೆ ತುಂಬಿ ಕೊಡುವುದು ಎಲ್ಲರಿಗೂ ಗೊತ್ತಿರುವ

ಕರ್ನಾಟಕದವರು ಮಾತ್ರ ಯೋಜನೆಯನ್ನು ತಯಾರು ಮಾಡಿಕೊಂಡು ಬನ್ನಿ ಎಂದು ಕೇಂದ್ರದ ಮಂತ್ರಿಗಳು ಹೇಳಿಲ್ಲ. ಅವರು ಇಡೀ ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ಹೇಳಿದ್ದಾರೆ. ನಾವು ಯಾವ ರೀತಿ ಸಹಾಯ ಮಾಡಬಹುದು, ಎಷ್ಟು ಸಹಾಯ ಮಾಡಬಹುದು ಎಂಬುದನ್ನೆಲ್ಲಾ ಅವರು ಹೇಳಿದ್ದಾರೆ. ಆದ್ದರಿಂದ ನಾವೂ ಯೋಜನೆಯನ್ನು ತಯಾರು ಮಾಡಬೇಕು. ಆಂಧ್ರದವರೂ ಮಾಡುತ್ತಾರೆ, ಅದೇ ರೀತಿ ತಮಿಳುನಾಡು, ಕೇರಳ, ಮಧ್ಯಪ್ರದೇಶ ಬಿಹಾರ, ಒರಿಸ್ಸಾ, ಗುಜರಾತ್ ಹೀಗೆ ಎಲ್ಲ ರಾಜ್ಯಗಳವರೂ ಯೋಜನೆಗಳನ್ನು ಮಾಡುತ್ತಾರೆ. ಅವರು ಯಾವ ರೀತಿ ಯೋಜನೆ ಮಾಡುತ್ತಾರೆಂಬುದನ್ನು ನೋಡೋಣ. ನಂತರ ನಾವು ಯಾವ ರೀತಿ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನೋಡೋಣ. ಇದರ ಬಗ್ಗೆ ಚರ್ಚೆ ಮಾಡುವಾಗ ಆ ಚರ್ಚೆಯಲ್ಲಿ ಏನು ವಿಚಾರಗಳು ಬರಬಹುದೆಂಬುದನ್ನೂ ಈ ಚೌಕಟ್ಟಿನಲ್ಲಿ ಸೇರಿಸಿ ಪರಿಶೀಲನೆ ಮಾಡುತ್ತೇವೆ. ಈ ಮಧ್ಯೆ ವಸೂಲಾತಿಯನ್ನು ನಿಲ್ಲಿಸಿ ಎಂದು ನೀವು ಹೇಳುತ್ತೀರಿ. ನಾನು ಅನೇಕ ಸಾರಿ ಹೇಳಿದ್ದೇನೆ. ವಸೂಲಾತಿ ಎಂಬುದು ಕೇವಲ ಪೇಪರ್‌ಮೇಲೆ ಮಾತ್ರ ಇದೆಯೇ ಹೊರತು ನಿಜವಾಗಿ ವಸೂಲಿ ಆಗುತ್ತಿಲ್ಲ. ನಮಗೆ ಯಾರೂ ಹಣವನ್ನು ಕೊಡುತ್ತಿಲ್ಲ. ಅವರಾಗಿಯೇ ಕೊಟ್ಟರೆ ಮಾತ್ರ ನಾವು ತೆಗೆದುಕೊಳ್ಳುತ್ತೇವೆ. ನೀವು ಕೊಡುತ್ತೀರೋ ಇಲ್ಲವೋ ಎಂದು ಕುತ್ತಿಗೆ ಹಿಡಿದು ತೆಗೆದುಕೊಳ್ಳುವುದಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಿಮ್ಮ ಭಾಗದಲ್ಲಿ ಕುಳಿತಿರತಕ್ಕ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್‌ನವರು ಹೇಳುತ್ತಾರೆ, ಏನ್ರಿ ಇಂಥ ಪರಿಸ್ಥಿತಿ ಬಂತು ಯಾರೂ ಸಾಲವನ್ನೇ ಕೊಡುವುದಿಲ್ಲ, ನಾವು ಯಾವರೀತಿ ಸಾಲವನ್ನು ವಸೂಲ್ಮಾಡಬೇಕು ಎಂದು. ಮೇಲ್ಮನೆಯಲ್ಲಿರತಕ್ಕ ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರು ಹೇಳುತ್ತಾರೆ, ಯಾರೂ ಕೂಡ ಹಣವನ್ನೇ ಕೊಡುತ್ತಿಲ್ಲ, ಸಾಲ ವಸೂಲಾಗುತ್ತಿಲ್ಲ. ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇವತ್ತು ಒತ್ತಾಯದಿಂದ ನಾವು ವಸೂಲ್ಮಾಡುವುದಕ್ಕಾಗುವುದಿಲ್ಲ. ಅವರಾಗಿಯೇ ಕೊಟ್ಟರೆ ತೆಗೆದುಕೊಳ್ಳೋಣ, ಇಲ್ಲದಿದ್ದರೆ ಸುಮ್ಮನಿರೋಣ ಎಂದು ಇದ್ದೇವೆ. ಆದರೆ ನೀವು ಕೇಳಿ ಹಾದು, ನೀವು ಏತಕ್ಕೆ ವಸೂಲ್ಮಾಡುವುದಿಲ್ಲ ಎಂದು, ನಾನು ತಮಗೆ ಹೇಳುತ್ತೇನೆ, ನಾವು ಇವತ್ತು ಒಂದು ಧರ್ಮಸಂಕಟದಲ್ಲಿ ಸಿಕ್ಕಿದ್ದೇವೆ ನಾವು ಇದನ್ನು ಹೇಳಿದರೆ ನಂಜೆ ನಬಾರ್ಡ್‌ನವರು ನಮ್ಮ ಕತ್ತು ಹಿಡಿಯುತ್ತಾರೆ, ಮಾನ್ಯ ಯಡಿಯೂರಪ್ಪನವರು ಹೇಳಿದರೆ ನಾನು ಈಗಲೂ ಸ್ಟೇಟ್‌ಮೆಂಟನ್ನು ಮಾಡುವುದಕ್ಕೆ ತಯಾರಿದ್ದೇನೆ. ನಬಾರ್ಡ್‌ನಿಂದ ರೀ ಫೈನಾನ್ಸ್ ಮಾಡಿಸುವ ಜವಾಬ್ದಾರಿ ನನಗೆ ಇರಲಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರೆ ನಾನು ಈಗಲೇ ಸ್ಟೇಟ್‌ಮೆಂಟ್ ಕೊಡುತ್ತೇನೆ. ನಬಾರ್ಡ್‌ನವರನ್ನು ಮೈಮೇಲೆ ಹಾಕಿಕೊಳ್ಳುವುದು ಬೇಡ, ನಬಾರ್ಡ್‌ನವರ ಡೈರೆಕ್ಷನ್ ಅನ್ನು ಉದ್ದೇಶಪೂರ್ವಕವಾಗಿ ವೈಯಲೇಟ್ ಮಾಡಿದ್ದೇವೆಂದು ಹೇಳುವುದು ಬೇಡ ಮತ್ತು ಕೇಂದ್ರ ಸರ್ಕಾರದವರೂ ಕೂಡ ಈ ರೀತಿ ರಿಕವರಿಯನ್ನು ಸ್ಟಾಪ್ ಮಾಡಿದ್ದೇವೆಂದು ಹೇಳುವುದು ಬೇಡ ಅಂತ ನಾವು ಹೇಳಿದ್ದೇವೆ. ಸಾಲ ಕೊಡುವುದಕ್ಕೆ ನಾವು ರಿಕವರಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದೇವೆಯೆ ಹೊರತು ರಿಕವರಿ ಆಗುತ್ತಿಲ್ಲ. ಇದು ಕೇವಲ ಕಾಗದದ ಮೇಲೆ ಮಾತ್ರ ಇದೆ. ಅವರಾಗಿಯೇ ಕೊಟ್ಟರೆ ನಾವು ತೆಗೆದುಕೊಳ್ಳುತ್ತೇವೆ ಇಲ್ಲದಿದ್ದರೆ ಇಲ್ಲ. ಸಾಲ ವಸೂಲಾತಿ ೧೦ ಸಾವಿರಕ್ಕಿಂತ ಮೇಲಿರತಕ್ಕ ಪ್ರಕರಣಗಳಲ್ಲಿ ಇರಬಹುದೇ ಹೊರತು ೧೦ ಸಾವಿರಕ್ಕಿಂತ ಕಡಿಮೆ ಇರತಕ್ಕ ಸಾಲಗಳ ವಸೂಲಾತಿ ಪ್ರಕರಣಗಳು ಇಲ್ಲ. ಒಂದು ವೇಳೆ ಅಂಥಾದ್ದು ಯಾವುದಾದರೂ ಇದ್ದರೆ ಅವನ್ನು ನನಗೆ ತಿಳಿಸಿದರೆ ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಟೆಲಿಫೋನ್ ಮಾಡಿ ತಿಳಿಸುತ್ತೇನೆ. ಇದು ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲವೆ? ರೈತರಿಗೆ ಗೊತ್ತಾಗುವುದಿಲ್ಲವೆ? ಇವತ್ತು ಇದು ಒಂದು ಸಣ್ಣ ವಿಚಾರ. ಆದರೆ ವಿರೋಧ ಪಕ್ಷದ ನಾಯಕರು ಹೇಳುತ್ತಿರತಕ್ಕ ವಿಚಾರ ಬಹಳ ಗಹನವಾದುದು. ೩೫೦ ಕೋಟಿ ರೂಪಾಯಿಗಳನ್ನು ನಾನು ಯಾವುದರಿಂದ ತೆಗೆದಿಡಬೇಕು. ಯಾವ ಬಾಜೆನಿಂದ ಕತ್ತರಿಸಬೇಕು. ಕೇಂದ್ರ ಸರ್ಕಾರದವರು ನಮಗೆ ಎಷ್ಟು ಕೊಡುತ್ತಾರೆ ಎಂಬುದನ್ನು ನಾವು ಯೋಚನೆ ಮಾಡಬೇಕು ಮಾನ್ಯ ಯಡಿಯೂರಪ್ಪನವರು ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ಗಳಿಗೆ ಯಾವ ರೀತಿ - ಕಾಂಪನ್‌ಸೇಟ್ ಮಾಡುತ್ತಾರೋ ಅದೇ ರೀತಿ ನಿಮಗೂ ಕಾಂಪನ್‌ಸೇಟ್ ಮಾಡುತ್ತಾರೆಂದು ಹೇಳಿದರು.

ಶ್ರೀ ಬಿ ಎಸ್. ಯಡಿಯೂರಪ್ಪ — ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಯಾವ ರೀತಿ ೧೦ ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳಿದ್ದಾರೆ. ಅದೇರೀತಿ ರಾಜ್ಯ ಸರ್ಕಾರಕ್ಕೂ ಅನ್ವಯವಾಗುವ ರೀತಿಯಲ್ಲಿ ಮಾಡಿ ಒಂದು ಪ್ರಪೋಸಲ್ ತಂದರೆ ನಾವು ಸಹಾಯವನ್ನು ಮಾಡುತ್ತೇವೆಂದು ಕೇಂದ್ರದವರು ಹೇಳಿದ್ದಾರೆ. ತಿರುಗು ಮುರುಗು ಅವನ್ನೇ ನಾನು ಮಾತನಾಡುತ್ತಿದ್ದರೆ ತಾವು ಕ್ಷಮಿಸಬೇಕು. ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಹಾಗೂ ಎಲ್ಲರಿಗೂ ಗೊತ್ತಿರುವ ಸಂಗತಿ ಏನೆಂದರೆ, ಈ ಸಾಲವನ್ನು ನಬಾರ್ಡ್ ಮೂಲಕ ಕೊಡುತ್ತಿದ್ದಾರೆ. ಇವತ್ತು ಬ್ಯಾಂಕ್ ಸಾಲ ಮನ್ನಾ ಮಾಡಿ ನಬಾರ್ಡ್‌ಗೆ ತುಂಬಿ ಕೊಡುವುದು ಎಲ್ಲರಿಗೂ ಗೊತ್ತಿರುವ

ತಮ್ಮ ಸಲಹೆ ಏನಾದರೂ ಇದ್ದರೆ ಕೊಡಿ, ಆ ಸಲಹೆಗಳನ್ನು ಎಷ್ಟರಮಟ್ಟಿಗೆ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ವಿಚಾರ ಮಾಡೋಣ, ಮತ್ತೆ ಕೇಂದ್ರ ಸರ್ಕಾರಕ್ಕೆ ಈ ಯೋಜನೆಯನ್ನು ಯಾವರೀತಿ ತಯಾರು ಮಾಡಿದ್ದೇವೆ ಎಂದು ಹೇಳಿ, ಪಬ್ಲಿಕ್ ಸೆಕ್ಟಾರ್ ಬ್ಯಾಂಕುಗಳಿಗೆ ಏನು ಸಹಾಯ ಮಾಡಿದ್ದೀರಿ ಅದೇರೀತಿ ಸಹಾಯವನ್ನು ಸಹಕಾರ ಸಂಘಗಳ ಸಾಲಕ್ಕೂ ಕೊಡಬೇಕೆಂದು ಕೇಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:-- ಇದು ರೈತರ ವಿರೋಧಿ ಸರ್ಕಾರ. ರೈತನ ಬಗ್ಗೆ ನಿಮಗೆ ಕಳಕಳಿ ಇಲ್ಲ. ಎಲ್ಲದ್ದಕ್ಕೂ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತೀರಿ. ಇದರಲ್ಲಿ ನಿಮ್ಮ ಜವಾಬ್ದಾರಿಯೂ ಇದೆ. ತಮ್ಮ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗುತ್ತೇವೆ.

(ಬಿ.ಜೆ.ಪಿ.ಯ ಸದಸ್ಯರುಗಳು ಸದನದಿಂದ ನಿರ್ಗಮಿಸಿದರು)

೧.೩೧ ಪಿ.ಎಂ.

ANNOUNCEMENT

MR. SPEAKER.-- Under Rule 9 of the Rules of Procedure and Conduct of Business in the Legislative Assembly I nominate the following members on the panel of Chairmen for the current Session.

1. Smt. Chandraprabha Urs
2. Smt. Renuka Rajendran
3. Sri G. Rajugowda
4. Sri Idinabba
5. Sri S. H. Koujalgi
6. Sri Basavaraj Patil Atoor

ಗಮನ ಸೆಳೆಯುವ ಸೂಚನೆಗಳು

ಮಂಡ್ಯ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ

ಶ್ರೀ ಎಂ. ಎಸ್. ಆತ್ಮಾನಂದ್.-- ಮಾನ್ಯ ಅಧ್ಯಕ್ಷರೇ ಮಂಡ್ಯ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರಕ್ಕೆ ಹಾಲಿ ನೀರು ಸರಬರಾಜು ಯೋಜನೆ ೧೯೭೧ ರಲ್ಲಿ ೧೧೫ ಲಕ್ಷ ರೂಪಾಯಿ ಅಂದಾಜನ್ನು ಸರ್ಕಾರ ಮಂಜೂರು ಮಾಡಿತು. ಯೋಜನೆಯನ್ನು ಕಾರ್ಯಗತಗೊಳಿಸಲು ಜಲಮಂಡಲಿಗೆ ೧೯೭೫ರಲ್ಲಿ ವರ್ಗಾಯಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಿ ೧೯೮೫ರಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇದರ ಮೂಲ ಸ್ಥಾವರ ಕಾವೇರಿ ನದಿಯಾಗಿದೆ.

ಹಾಲಿ ಯೋಜನೆಯನ್ನು ೨೦೦೧ನೇ ಇಸವಿಯಲ್ಲಿ ಊಹಿಸಲಾದ ೧,೧೫,೦೦೦ ಜನಸಂಖ್ಯೆಗೆ ದಿನಂಪ್ರತಿ ತಲಾ ೧೧೨ ಲೀಟರ್ (೨೫ ಗ್ಯಾಲನ್)ನೀರನ್ನು ಸರಬರಾಜು ಮಾಡಲು ಯೋಜಿಸಲಾಗಿತ್ತು. ಆದರೆ ಈಗಾಗಲೇ ಮಂಡ್ಯ ನಗರದ ಜನಸಂಖ್ಯೆಯು ಸುಮಾರು ೧,೨೫,೦೦೦ಕ್ಕಿಂತಲೂ ಹೆಚ್ಚಾಗಿರುವುದು. ಇದಲ್ಲದೆ ಪ್ರತಿ ದಿನವೂ ವಿದ್ಯುತ್ ಕೊರತೆಯಿಂದಾಗಿ ೧೮ ರಿಂದ ೨೦ ಗಂಟೆಗಳ ಕಾಲ ಮಾತ್ರ ಪಂಪುಗಳನ್ನು ಚಾಲನೆ ಮಾಡಲು ಸಾಧ್ಯವಾಗುತ್ತಿದೆ. ಹೀಗಾಗಿ ಹಾಲಿ ದಿನಂಪ್ರತಿ